ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಜೂನ್ 04, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 21 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999





ಶ್ರೀ ಮೃತ್ಯುಂಜಯ ಎಜುಕೇಷನಲ್ ಟ್ರಸ್ಟ್ (ರಿ.) 8217587648, 9113925620

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್**

& ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್

ಪಿ.ಜೆ. ಬಡಾವಣೆ ಬ್ರಾಂಚ್ :# 694, ಚರ್ಚ್ ಕಾರ್ನರ್, 8ನೇ ಮುಖ್ಯ ರಸ್ತೆ, ದಾವಣಗೆರೆ
ಕೆ.ಟಿ.ಜೆ.ನಗರ ಬ್ರಾಂಚ್ : # 1698/1, 18ನೇ ಕ್ರಾಸ್, ಕೆ.ಇ.ಬಿ. ಆಫೀಸ್ ಹತ್ತಿರ, ದಾವಣಗೆರೆ.

ಕ್ಯಾಂಪಸ್ ಸಂದರ್ಶನ ಇರುತ್ತದೆ.



ಪ್ರವೇಶ ಪ್ರಾರಂಭ

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಮುಗಿಸಿದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ
DIPLOMA IN GENERAL NURSING MIDWIFERY (GNM)
DIPLOMA IN HEALTH INSPECTOR (DHI), DIPLOMA IN LAB TECHNOLOGY (DMLT)

ಜಿ.ಎನ್.ಎಂ., ಲ್ಯಾಬ್, ಹೆಲ್ತ್,
ಪ್ರವೇಶಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ದೂ : 08192-230770, 9845576683


# ದಾವಣಗೆರೆ ನೂತನ ಸಚಿವರಿಗೆ ಅದ್ಧೂರಿ ಸ್ವಾಗತ





ದಾವಣಗೆರೆ, ಜೂ.3- ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಖಾತೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರಿ ವಹಿಸಿಕೊಂಡು, ಪ್ರಥಮ ಬಾರಿಗೆ ದಾವಣಗೆರೆಗೆ ಆಗಮಿಸಿದ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಶನಿವಾರ ಅದ್ಧೂರಿ ಸ್ವಾಗತ ಕೋರಲಾಯಿತು.

ಬೆಂಗಳೂರಿನಿಂದ ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠಕ್ಕೆ ತೆರಳಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದ ಮಲ್ಲಿಕಾರ್ಜುನ್ ಅವರು, ಸಂಜೆ 5.50ರ ವೇಳೆಗೆ ಜಿಲ್ಲಾ ಪಂಚಾಯ್ತಿ ಕಛೇರಿ ಆವರಣಕ್ಕೆ ಆಗಮಿಸಿದರು.

ಸಚಿವರು ಬರುವ ಸುದ್ದಿ ತಿಳಿದು ಅಭಿಮಾನಿಗಳು, ಕಾರ್ಯಕರ್ತರು ಮಧ್ಯಾಹ್ನ 3 ಗಂಟೆ ವೇಳೆಗೆ ಸಾವಿರಾರು ಸಂಖ್ಯೆಯಲ್ಲಿ ಜಿಲ್ಲಾ ಪಂಚಾಯ್ತಿ ಮುಂಭಾಗ ಜಮಾಯಿಸಿದ್ದರು.

**ಜಿಲ್ಲಾ ಪಂಚಾಯ್ತಿ ಕಚೇರಿ ಮುಂಭಾಗ ಜೆ.ಹೆಚ್. ಪಟೇಲ್ ಪ್ರತಿಮೆಗೆ ಎಸ್ಸೆಸ್ಸೆಂ ಪುಷ್ಪಾರ್ಚನೆ, ತೆರೆದ ವಾಹನದಲ್ಲಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ**

ಸಂಜೆ 5.15ರ ಸುಮಾರಿಗೆ ಜಿಲ್ಲಾ ಪಂಚಾಯ್ತಿ ಮುಂಭಾಗದ ಹೆದ್ದಾರಿ ಮೂಲಕವೇ ಶಾಮನೂರಿಗೆ ತೆರಳಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮತ್ತೆ ಜಿಲ್ಲಾ ಪಂಚಾಯ್ತಿಗೆ 5.50ಕ್ಕೆ ಆಗಮಿಸಿದರು.

ಸಚಿವರು ಕಾರಿನಲ್ಲಿ ಆಗಮಿಸುತ್ತಿದ್ದಂತೆಯೆ ಅವರಿಗೆ ಹಾರ-ತುರಾಯಿ ಹಾಕಲು ನೂಕು ನುಗ್ಗಲು ಉಂಟಾಯಿತು. ಜನರನ್ನು ನಿಯಂತ್ರಣಕ್ಕೆ ತರಲು ಪೊಲೀಸರು ಹರ ಸಾಹಸ ಪಡಬೇಕಾಯಿತು.

ಅಪಾರ ಸಂಖ್ಯೆಯಲ್ಲಿ ಜಮಾಯಿಸಿದ್ದ ಅಭಿಮಾನಿಗಳ ಘೋಷಣೆ ಮುಗಿಲು ಮುಟ್ಟಿತ್ತು. ಮಲ್ಲಿಕಾರ್ಜುನ್ ಭಾವಚಿತ್ರದ ಬಾವುಟಗಳ ರಾರಾಜಿಸಿದವು. ಅವರಿಗೆ ಪುಷ್ಪ ವೃಷ್ಠಿ ಮಾಡಿ ಸ್ವಾಗತಿಸಲಾಯಿತು.

ಜಿ.ಪಂ. ಆವರಣಕ್ಕೆ ಆಗಮಿಸಿದ ಎಸ್ಸೆಸ್ಸೆಂ, ಜೆ.ಹೆಚ್. ಪಟೇಲ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಈ ವೇಳೆ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಚನ್ನಗಿರಿ ಶಾಸಕ (5ನೇ ಪುಟಕ್ಕೆ)

# ಕೇಂದ್ರ 15 ಲಕ್ಷ ಕೊಟ್ಟು ಮಾತು ಉಳಿಸಿಕೊಳ್ಳಲಿ: ಡಿಕೆಶಿ ಸವಾಲು

ಬೆಂಗಳೂರು, ಜೂ. 3 - ಸದ್ಯದಲ್ಲೇ ಕೇಂದ್ರ ಸರ್ಕಾರಕ್ಕೆ ಪರೀಕ್ಷೆ ಎದುರಾಗುತ್ತಿದ್ದು, ಅದರಲ್ಲಿ ಅವರು ಪಾಸ್ ಆಗಲು ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳಲಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಲೆ ಏರಿಕೆಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ಆರ್ಥಿಕ ಹೊರೆ ತಗ್ಗಿಸಲು ಕಾಂಗ್ರೆಸ್ ಸರ್ಕಾರ ಈ ಗ್ಯಾರಂಟಿ ಯೋಜನೆಗಳನ್ನು ನೀಡಿದೆ ಎಂದರು.



ವಿರೋಧ ಪಕ್ಷದವರು ಇರುವುದೇ ಟೀಕೆ ಮಾಡಲು, ಅವರು ಟೀಕೆ ಮಾಡಲಿ. ಅವರು ಟೀಕೆ ಮಾಡುವ ಮೊದಲು ಪ್ರಧಾನಮಂತ್ರಿಗಳು ಈ ಹಿಂದೆ ಹೇಳಿದಂತೆ ವಿದೇಶದಿಂದ ಕಪ್ಪು ಹಣ ತರಲಿ, ಎಲ್ಲರ ಖಾತೆಗೆ 15 ಲಕ್ಷ ರೂ ಹಾಕಲಿ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡಲಿ. ರೈತರ ಆದಾಯ ಡಬಲ್ ಮಾಡಲಿ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್‌ನವರು ಹಣೆಗೆ ತುಪ್ಪ ಸವರುತ್ತಿದ್ದಾರೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಟೀಕೆ ಕುರಿತು ಕೇಳಿದಾಗ, ಕುಮಾರಣ್ಣ ದೊಡ್ಡವರು, ಅವರಿಗೆ ಬಹಳ ಅನುಭವವಿದೆ. ಅವರ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ನನ್ನ ಕರ್ತವ್ಯ ಮಾಡುತ್ತೇನೆ. ಅವರು ಅವರ ಕೆಲಸ (5ನೇ ಪುಟಕ್ಕೆ)

## ಗ್ಯಾರಂಟಿ ತ್ಯಜಿಸಲು ಅವಕಾಶ

ರಾಜ್ಯ ಸರ್ಕಾರ ಪ್ರಕಟಿಸಿರುವ ಗ್ಯಾರಂಟಿ ಯೋಜನೆಗಳನ್ನು ತ್ಯಜಿಸಲು ಅವಕಾಶ ಕಲ್ಪಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಯೋಜನೆಯ ಫಲ ತ್ಯಜಿಸಲು ಅವಕಾಶ ಕಲ್ಪಿಸುವಿರಾ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಖಂಡಿತವಾಗಿಯೂ ಇದಕ್ಕೆ ಅವಕಾಶ ಕಲ್ಪಿಸುತ್ತೇವೆ ಎಂದರು.

ಒಂದು ವೇಳೆ ಯಾರಿಗಾದರೂ ಈ ಯೋಜನೆ ಫಲ ಬೇಡವಾದರೆ ಅದನ್ನು ಅವರು ತ್ಯಜಿಸಿ ವಿದ್ಯುತ್ ಬಿಲ್ ಕಟ್ಟಬಹುದು. ಅನೇಕ ಅಧಿಕಾರಿಗಳು, ಮಾಧ್ಯಮ ಮುಖ್ಯಸ್ಥರು, ಸರ್ಕಾರಿ ನೌಕರರು ಈ ಗೃಹಜ್ಯೋತಿ ಯೋಜನೆಯ ಫಲ ಬೇಡ ಎಂದು ಪತ್ರ ಬರೆದರೆ, ಮತ್ತೆ ಕೆಲವರು ಖುದ್ದಾಗಿ ಹೇಳಿದ್ದಾರೆ ಎಂದು ತಿಳಿಸಿದರು.

ಯಾರಿಗೆಲ್ಲ ಈ ಯೋಜನೆಯ ಲಾಭ ಬೇಡವೋ ಅವರಿಗೆ ಇದನ್ನು ತ್ಯಜಿಸಲು ಅವಕಾಶ ನೀಡಲಾಗುವುದು. ಅದಕ್ಕಾಗಿ ಈ ಯೋಜನೆಗಳ ಫಲ ಪಡೆಯಲು ಅರ್ಜಿಯನ್ನು ಕರೆಯಲಾಗಿದೆ ಎಂದು ಹೇಳಿದರು. ಕೇಂದ್ರ ಸರ್ಕಾರ ಅಡುಗೆ ಅನಿಲ ಸಬ್ಸಿಡಿ ತ್ಯಜಿಸಲು ಕರೆ ಕೊಟ್ಟಾಗ ಅನೇಕರು ಅದಕ್ಕೆ ಸ್ಪಂದಿಸಿ ಸಬ್ಸಿಡಿಯನ್ನು ಕೈಬಿಟ್ಟಿದ್ದರು. ಅದೇ ರೀತಿ ಇಲ್ಲಿಯೂ ಯೋಜನೆ ಲಾಭ ತ್ಯಜಿಸಬಹುದು ಎಂದು ತಿಳಿಸಿದರು.


‘ದವನ್’ ವಿದ್ಯಾರ್ಥಿಗಳ ವಿದೇಶ ಪ್ರವಾಸಕ್ಕೆ ಶುಭಾಶಯಗಳು



DAVAN
INTERNATIONAL EDUCATIONAL TRIP TO
Malaysia
4 JUNE 2023

ಹೃದಯಪೂರ್ವಕ ಅಭಿನಂದನೆಗಳು



ಕರ್ನಾಟಕ ಸರ್ಕಾರದ ಸಂಪುಟ ದರ್ಜೆಯ ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಾದ
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ರವರಿಗೆ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಮಾಜಿ ಸಚಿವರಾದ
ಸನ್ಮಾನ್ಯ ಶ್ರೀ ಡಾ|| ಶಾಮನೂರು ಶಿವಶಂಕರಪ್ಪ ರವರಿಗೆ
ಹಾಗೂ ಮಾನ್ಯ ಶಾಸಕರುಗಳಾದ ಹೊನ್ನಾಳಿಯ ಶ್ರೀ ಶಾಂತನಗೌಡರು
ಮಾಯಕೊಂಡದ ಶ್ರೀ ಕೆ.ಎಸ್. ಬಸವಂತಪ್ಪ
ಚನ್ನಗಿರಿ ಕ್ಷೇತ್ರದ ಶ್ರೀ ಬಸವರಾಜ ವಿ. ಶಿವಗಂಗಾ ಮತ್ತು
ಜಗಳೂರು ಕ್ಷೇತ್ರದ ಶ್ರೀ ದೇವೇಂದ್ರಪ್ಪ ಅವರಿಗೂ
ಹೃತ್ಪೂರ್ವಕವಾದ ಅಭಿನಂದನೆಗಳು.



ಶಾಮನೂರು ಟಿ. ಬಸವರಾಜ್
ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ, ದಾವಣಗೆರೆ.



ಶಾಮನೂರು ತಿಪ್ಪೇಗುಂಡಿ ನಾಗರಾಜ್ ಹರೀಶ್ ಟಿ.ಎಂ. ಅರುಣ್‌ಕುಮಾರ್ ಟಿ.ಎಂ. ಕಿರಣ್‌ಕುಮಾರ್ ಟಿ.ಎಂ.

ಗೆಲುವಿಗೆ ಶ್ರಮಿಸಿದ ದಾವಣಗೆರೆ ಜಿಲ್ಲೆಯ ಸಮಸ್ತ ಮತದಾರ ಬಾಂಧವರಿಗೂ, ಮುಖಂಡರಿಗೂ, ಹಗಲಿರುಳು ಶ್ರಮಿಸಿದ ಕಾರ್ಯಕರ್ತರಿಗೂ, ಮಹಾನಗರ ಪಾಲಿಕೆ ಸದಸ್ಯರಿಗೂ, ಪುರಸಭೆ, ನಗರಸಭೆ ಸದಸ್ಯರಿಗೂ, ತಾ.ಪಂ., ಜಿ.ಪಂ. ಸದಸ್ಯರು ಗಳಿಗೂ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಿಗೂ, ಜಿಲ್ಲಾ ಮುಂಚೂಣಿ ಘಟಕದ ಎಲ್ಲಾ ಅಧ್ಯಕ್ಷರುಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳು.

|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಿ|| ಶ್ರೀ ಕಾಡಜ್ಜಿ ವೀರಪ್ಪ, ಕಕ್ಕರಗೊಳ್ಳ ಇವರ ಸೊಸೆ
ಶ್ರೀಮತಿ ಪ್ರೇಮ ನಾಗರಾಜ್ ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪೂಜ್ಯ ಪತಿಯವರಾದ
ಶರಣ ಡಾ|| ಕೆ. ನಾಗರಾಜಪ್ಪ
ಪ್ರಾಧ್ಯಾಪಕರು, ಬಯೋ ಕೆಮಿಸ್ಟ್ರಿ ವಿಭಾಗ, ಎಸ್.ಎಸ್. ಮೆಡಿಕಲ್ ಕಾಲೇಜು, ದಾವಣಗೆರೆ ಮತ್ತು ಆಕ್ಸ್‌ಫರ್ಡ್ ಮೆಡಿಕಲ್ ಕಾಲೇಜು, ಬೆಂಗಳೂರು
ಇವರು ದಿನಾಂಕ 24-05-2023ರ ಬುಧವಾರ ಸಂಜೆ 5.15ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧ ‘ಕೈಲಾಸ ಶಿವಗಣಾರಾಧನೆ’ಯನ್ನು
ಇಂದು ದಿನಾಂಕ 04-06-2023ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ತರಳಬಾಳು ಸಭಾಭವನ, ಹದಡಿ ರಸ್ತೆ, ದಾವಣಗೆರೆ (ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಆವರಣ) ಇಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.



ಜನನ: 10.08.1954 ಮರಣ : 24.05.2023

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

ಇಂತಿ ದುಃಖತಪ್ತರು :
ಧರ್ಮಪತ್ನಿ : ಶ್ರೀಮತಿ ಪ್ರೇಮ ನಾಗರಾಜ್, ಪುತ್ರಿ : ಶ್ರೀಮತಿ ಉಷಾ ನಾಗರಾಜ್, ಶ್ರೀ ಎಂ.ಜಿ. ಸತೀಶ್, ಚಿ|| ಪೃಥ್ವಿ
ಸಹೋದರ : ಡಾ|| ಕೆ. ಸಿದ್ದಪ್ಪ, ವಿಶ್ರಾಂತ ಉಪ ಕುಲಪತಿ, ಬೆಂಗಳೂರು ವಿ.ವಿ. ಮತ್ತು ಸಹೋದರಿಯರು.
ಕಾಡಜ್ಜಿ ಮನೆತನದವರು ಹಾಗೂ ಬಂಧು-ಮಿತ್ರರು. ಕಕ್ಕರಗೊಳ್ಳ. ಮೊ. 94811 62320, 94811 62321

# ವಾರ ಭವಿಷ್ಯ

**ದಿನಾಂಕ : 04.06.2023 ರಿಂದ 10.06.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವೃತ್ತಿ ಅಥವಾ ಕೆಲಸದ ನಿಮಿತ್ತ ದೂರದ ಊರುಗಳಿಗೆ ಪ್ರಯಾಣ ಮಾಡಲೇ ಬೇಕಾದ ಅನಿವಾರ್ಯತೆಯುಂಟಾಗಲಿದೆ. ಅರ್ಚಕ ಅಥವಾ ವೈದಿಕ ವೃತ್ತಿಯಲ್ಲಿರು ವವರಿಗೆ ಹೆಚ್ಚಿನ ಸಂಪಾದನೆಯಾಗಲಿದೆ. ಪ್ರಾಪ್ತ ವಯಸ್ಕರಾದ ಯುವಕರ ಬದುಕಿನ ಬಗ್ಗೆ ಚಿಂತೆಯಾಗಲಿದೆ. ಸರ್ಕಾರದಿಂದ ಬರಬೇಕಾಗಿರುವ ಧನ ಸಹಾಯವು ವಸ್ತುಗಳ ರೂಪದಲ್ಲಿ ದೊರೆಯಲಿದೆ.ಆರಕ್ಷರ ಕರ್ತವ್ಯದಲ್ಲಿ ಉಂಟಾಗ ಬಹುದಾದ ಲೋಪದೋಷಗಳಿಂದಾಗಿ ಮೇಲಾಧಿಕಾರಿಗಳಿಂದ ನಿಂದಾವಾಕ್ಯಗಳನ್ನು ಕೇಳಬೇಕಾದೀತು. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕಟ್ಟಡಗಳ ನಿರ್ಮಾಣ ಕೆಲಸವನ್ನು ವಹಿಸಿಕೊಂಡಿರುವ ಗುತ್ತಿಗೆ ದಾರರು, ಹೇಳಿದ ಸಮಯದಲ್ಲಿ ಮಾಡಿ ಮುಗಿಸುವುದು ಮೇಲು. ಇಲ್ಲವಾದಲ್ಲಿ ಭಾರೀ ದಂಡವನ್ನು ತೆರಬೇಕಾದೀತು.ಆದಾಯದಲ್ಲಿ ಹೆಚ್ಚಳ ಕಂಡು ಬರಲಿದೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಪದೋನ್ನತಿಯಾಗಲಿದ್ದು ಜೊತೆಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಮಡದಿ-ಮಕ್ಕಳೊಂದಿಗೆ ನೆಮ್ಮದಿಯಾಗಿ ಕಾಲಕಳೆ ಯುವ ಯೋಗ ನಿಮ್ಮದಾಗಲಿದೆ. ವಿದ್ಯಾರ್ಥಿಗಳು ತುಸು ಉಡಾಫೆ ತೋರಿದರೂ ಅಧ್ಯಯನದಲ್ಲಿ ಹಿಂದೆ ಬೀಳುವ ಸಂಭವವಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಮಾತಿನ ಮೋಡಿಯಿಂದ ಜನರನ್ನು ನಂಬಿಸುವ ಕಲೆ ನಿಮಗೆ ಕರಗತವಾಗಿದ್ದು, ಎಲ್ಲರನ್ನೂ ಆಕರ್ಷಿಸುವಿರಿ. ಆದರೆ ಇದು ಸದಾಕಾಲ ನಡೆಯು ವುದಿಲ್ಲ ಎಂಬುದು ನೆನಪಿರಲಿ. ಸೋದರಿಯೊಂದಿಗೆ ಆಸ್ತಿ ನಿಮಿತ್ತ ಉಂಟಾಗಬಹು ದಾದ ಮನಸ್ತಾಪವನ್ನು ಮಾತುಕತೆ ಮುಖಾಂತರ ಬಗೆಹರಿಸಿಕೊಳ್ಳಿ. ಉನ್ನತಾಧ್ಯ ಯನಕ್ಕೆ ಉತ್ತಮ ವಿಷಯಗಳನ್ನು ಸಂಶೋಧಕರು ಆಯ್ಕೆ ಮಾಡುವುದು ಉತ್ತಮ. ರಾಜಕಾರಣಿಗಳಿಗೆ ಪಕ್ಷದಲ್ಲಿ ಸ್ಥಾನಮಾನ ಹೆಚ್ಚಲಿದೆ. ಆದಾಯ ಸಾಧಾರಣ ವಾಗಿದ್ದು, ಉಳಿತಾಯ ಕಷ್ಟವಾಗಲಿದೆ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಮನೆಯ ಸದಸ್ಯರು ಮಿತಿಮೀರಿ ಮಾಡುವ ಖರ್ಚುಗಳಿಂದಾಗಿ ಆದಾಯ ಉತ್ತಮವಾಗಿದ್ದರೂ ಸಾಲದೇ ಹೋಗಬಹುದು. ಆಸ್ತಿ ಖರೀದಿ ವಿಚಾರದಲ್ಲಿ ಅವಸರಬೇಡ. ಮಕ್ಕಳ ವಿಚಾರದಲ್ಲಿ ಅನಾವಶ್ಯಕ ಚಿಂತೆಬೇಡ. ಸರ್ಕಾರಿ ಉನ್ನತಾಧಿಕಾರಿಗಳು ಆಡಳಿತಾತ್ಮಕವಾಗಿ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳದೇ ವಿಧಿಯಿಲ್ಲ. ದೇವಾಲಯದ ನಿರ್ಮಾಣ ಕಾರ್ಯಕ್ಕೆ ನಿಮ್ಮ ದೇಣಿಗೆ ಸಲ್ಲಲಿದೆ. ಸಾಮಾಜಿಕವಾಗಿ ಸ್ಥಾನಮಾನ ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನಕ್ಕೆ ಯಶಸ್ಸು ದೊರೆಯಲಿದೆ. ಸೋಮ-ಗುರು-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನಿಮ್ಮ ಖಾಸಗಿ ಬದುಕಿನಲ್ಲಿ ಮಹತ್ತರ ಬದಲಾವಣೆಯಾಗಲಿದ್ದು ಇದರಿಂದ ಬಹುದಿನದ ಬಯಕೆಗಳಲ್ಲಿ ಬಹುಪಾಲು ನೆರವೇರಲಿವೆ. ಗಹನವಾದ ವಿಚಾರಗಳಲ್ಲಿ ನೀವೇ ಸ್ವಂತ ನಿರ್ಧಾರ ಕೈಗೊಳ್ಳದೇ, ಅನುಭವಿಗಳಾದ ಹಿರಿಯರ ಸಲಹೆಗಳನ್ನು ಪಡೆಯುವುದು ಮೇಲು. ಸಿನಿಮಾ ಕಲಾವಿದರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿದ್ದು, ಸಂಪಾದನೆ ಹೆಚ್ಚಲಿದೆ. ಸಂಬಂಧಿಗಳೊಂದಿಗೆ ಅನುಬಂಧವು ಗಟ್ಟಿಯಾಗಿರಲಿ. ಸಂಪಾದನೆ ಖರ್ಚಿಗೆ ಅನುಗುಣವಾಗಿರು ವುದರಿಂದ, ಉಳಿತಾಯದ ಚಿಂತೆ ಬೇಡ. ಗುರುಗಳ ಸೇವೆ ಮಾಡಿ. ಭಾನು-ಮಂಗಳ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಬೇರೆಯವರ ಮಾತಿನಂತೆ ನಡೆದುಕೊಳ್ಳುತ್ತಿರುವ ಯುವಕರನ್ನು ಹಿತವಾದ ಮಾತುಗಳಿಂದ ಸರಿದಾರಿಗೆ ತರುವಲ್ಲಿ ವಿಫಲರಾಗುವಿರಿ. ಮಡದಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ, ಆದರೂ ಸೂಕ್ತ ವೈದ್ಯರ ಸಂಪರ್ಕದಲ್ಲಿರುವುದು ಮೇಲು. ವಿದ್ಯಾವಂತನಾದ ಮಗನಿಗೆ ಉತ್ತಮ ವೇತನದ ಕೆಲಸ ಖಾಸಗಿ ಕಂಪನಿಯೊಂದರಲ್ಲಿ ದೊರೆಯಲಿದೆ. ಅವಿವಾಹಿತರ ವಿವಾಹದ ವಿಚಾರವು ಕಾಣದ ಕೈಯೊಂದರ ಕರಾಮತ್ತಿನಿಂದಾಗಿ ಅನಿರ್ದಿಷ್ಟಕಾಲ ಮುಂದೆ ಹೋಗಬಹುದು. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಭಾರೀ ಕೈಗಾರಿಕೋದ್ಯಮಿಗಳು ಕಂಪನಿಯ ಪಾಲುದಾರ ರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮುನ್ನಡೆಯುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆ ಕಂಡುಬರಲಿದೆ. ಕೊಟ್ಟ ಸಾಲವನ್ನು ಆದಷ್ಟುಬೇಗ ಮರಳಿ ಪಡೆಯುವುದು ಮೇಲು. ಇಲ್ಲವಾದಲ್ಲಿ ಪಂಗನಾಮ ಬಿದ್ದೀತು. ಸಮಾಜ ಸೇವೆಯಲ್ಲಿರುವವರು ಅದಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸರಿಯಾಗಿ ಮತ್ತು ಕ್ರಮಬದ್ಧವಾಗಿ ಕಾಪಾಡುವುದು ಉತ್ತಮ. ಸಂತಾನಾಪೇಕ್ಷಿಗಳಿಗೆ ಶುಭ ಸಮಾ ಚಾರವೊಂದು ಇಷ್ಟರಲ್ಲೇ ಕೇಳಿಬರಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ರಾಜಕೀಯ ವ್ಯಕ್ತಿಗಳು ತಮ್ಮ ಹಿಂದಿನ ವೈಫಲ್ಯಗಳನ್ನು ಮರೆತು ಮುನ್ನಡೆಯುವುದು ಭವಿಷ್ಯದ ದೃಷ್ಟಿಯಿಂದ ಉತ್ತಮ ನಿರ್ಧಾರವಾಗಲಿದೆ. ಸಂಘ-ಸಂಸ್ಥೆಗಳಲ್ಲಿ ತೊಡಗಿಕೊಂಡವರಿಗೆ ಉನ್ನತ ಹುದ್ದೆ ದೊರೆಯಲಿದೆ. ಎಲ್ಲರನ್ನೂ ಮತ್ತು ಎಲ್ಲವನ್ನೂ ಸಂಶಯದ ದೃಷ್ಟಿಯಿಂದ ನೋಡುವುದನ್ನು ಮೊದಲು ಬಿಡಿ. ಹಿರಿಯರೊಂದಿಗಿದ್ದ ಮನಸ್ತಾಪ ದೂರವಾಗಿ ಅವರನ್ನು ಸನ್ಮಾನಿಸುವಿರಿ. ವೃತ್ತಿ ಹಾಗೂ ಪ್ರವೃತ್ತಿ ಎರಡರಿಂದಲೂ ಸಂಪಾದನೆ ಹೆಚ್ಚಲಿದೆ. ಅಧ್ಯಾಪಕ ವರ್ಗದವರಿಗೆ ಸರ್ಕಾರದಿಂದ ಸನ್ಮಾನವಾಗಲಿದೆ. ಭಾನು-ಮಂಗಳ-ಬುಧ-ಶುಭದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಗೃಹಿಣಿಯರು ಮನೆಯ ಎಲ್ಲಾ ಸದಸ್ಯರನ್ನು ಅನುಸರಿಸುತ್ತಾ, ಹಿರಿಯರ ಮೆಚ್ಚುಗೆ ಪಡೆಯುವರು. ವೈಯಕ್ತಿಕ ಗುಟ್ಟನ್ನು ಅನಾಪ್ತರೊಂದಿಗೆ ಹಂಚಿಕೊಳ್ಳ ಬೇಡಿ. ತರಕಾರಿ ಬೆಳೆಗಾರರಿಗೆ ಉತ್ತಮವಲ್ಲದಿದ್ದರೂ, ಸಮಾಧಾನಕರ ಲಾಭ ದೊರೆಯಲಿದೆ. ಉದ್ಯಮಿಗಳಿಗೆ ಬಹಳ ಕಾಲದಿಂದ ನಿರೀಕ್ಷಿತ ಯೋಜನೆಗಳಿಗೆ ಸರ್ಕಾರದಿಂದ ಒಪ್ಪಿಗೆ ದೊರೆಯಲಿದೆ. ಯಾರಿಂದಲೇ ಆಗಲಿ ಅತಿಯಾದ ನಿರೀಕ್ಷೆಬೇಡ. ಆತ್ಮವಿಶ್ವಾಸದೊಂದಿಗೆ ಮುನ್ನಡೆಯಿರಿ. ಗುರು ಚರಿತ್ರೆ ಪಠಿಸಿ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಆದಾಯ ತೆರಿಗೆ ಅಧಿಕಾರಿಗಳಿಗೆ ಮಂತ್ರಿಮಹೋದಯರಿಂದ ಬಲವತ್ತರವಾದ ಒತ್ತಡ ಬರಲಿದೆ. ಮೊದಲ ದರ್ಜೆ ಸಿವಿಲ್ ಗುತ್ತಿಗೆದಾರರಿಗೆ ಬಾಕಿ ಹಣ ಕೈಸೇರುವುದು ಮಾತ್ರವಲ್ಲದೇ, ಹಲವು ಉತ್ತಮ ಅವಕಾಶಗಳು ದೊರೆಯಲಿವೆ. ಗುಪ್ತಚರ ಇಲಾಖಾ ನೌಕರರು ಮಹತ್ತರವಾದ ಪ್ರಸಂಗವನ್ನು ಭೇದಿಸಿ, ಸರ್ಕಾರದಿಂದ ಮಾತ್ರವಲ್ಲದೇ ಸಾರ್ವಜನಿಕರಿಂದ ಗೌರವ ಪಡೆಯುವರು. ಸಂಶೋಧನಾ ರಂಗದಲ್ಲಿ ತೊಡಗಿಕೊಂಡವರು ತಮ್ಮ ಸಂಶೋಧನಾ ವಿಷಯದ ಅರಿವಿರುವುದು ಬಲುಮುಖ್ಯ. ಸೋಮ-ಶುಕ್ರ-ಶನಿ-ಶುಭ ದಿನಗಳು,

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಆಸ್ತಿ ಅಥವಾ ಹೊಸಮನೆ ಕಟ್ಟುವ ಮೊದಲು ಅದಕ್ಕೆ ಬೇಕಾಗಿರುವ ಹಣಕಾಸಿನ ವ್ಯವಸ್ಥೆಯನ್ನು ಮೊದಲೇ ಮಾಡಿಕೊಳ್ಳುವುದು ಮೇಲು. ಇಲ್ಲವಾದಲ್ಲಿ ಕೊಟ್ಟ ಮುಂಗಡ ಹಣಕ್ಕೆ ಸಂಚಕಾರ ಬರಬಹುದು. ಶಾಸ್ತ್ರೀಯ ವಿದ್ವಾಂಸರಿಗೆ ಮಠಮಾನ್ಯಗಳಿಂದ ಗೌರವ ಸಂದಲಿದೆ. ಕೆಲವೊಮ್ಮೆ ಯುವಕರಾಡುವ ಮಾತುಗಳು ಅತಿಯಾಗಿ, ಯಾರೂ ನಂಬದೇ ಹೋಗಬಹುದು.ರೈತಾಪಿ ಜನರಿಗೆ ಬಿಡುವಿಲ್ಲದ ಕೆಲಸವಾಗಲಿದೆ. ಹೈನುಗಾರಿಕೆ ಹೆಚ್ಚಿನ ಲಾಭವನ್ನು ತರದೇ ಹೋದರೂ ನಷ್ಟವನ್ನಂತೂ ಖಂಡಿತಾ ಮಾಡುವುದಿಲ್ಲ. ಸೋಮ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಖಾಸಗಿ ಕಂಪನಿಯಲ್ಲಿ ದುಡಿಯುವ ಮಹಿಳೆಯರಿಗೆ ಮುಂಬಡ್ತಿಯೊಂದಿಗೆ ವೇತನದಲ್ಲಿ ಹೆಚ್ಚಳವಾದರೂ, ಹೆಚ್ಚಿನ ಜವಾಬ್ದಾರಿಯನ್ನು ಹೊರುವುದು ಅನಿವಾರ್ಯವಾಗಲಿದೆ. ಈ ಹಿಂದೆ ಶಿಥಿಲವಾಗಿದ್ದ ಹಳೆ ಮನೆಯನ್ನು ನವೀಕರಿಸಲು ಹಿರಿಯರು ಈಗ ಒಪ್ಪಿಗೆ ಕೊಡುವರು. ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಯೇ ಇರುವುದರಿಂದ ದೈನಂದಿನ ಜೀವನದ ಬಗ್ಗೆ ಚಿಂತೆಬೇಡ. ದಿನಸಿ ಹಾಗೂ ಮಸಾಲೆ ಸಾಮಾನುಗಳ ಸಗಟು ಮಾರಾಟಗಾರರಿಗೆ ಉತ್ತಮ ವಹಿವಾಟು ನಡೆಯಲಿದೆ. ಹೊಸ ವಾಹನ ಖರೀದಿಯನ್ನು ಎಚ್ಚರದಿಂದ ಮಾಡಿ. ಭಾನು-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು :**

**ದಿನಾಂಕ : 7.6.2023 ನೇ ಬುಧವಾರ ಸಂಕಷ್ಟ ಚತುರ್ಥೀ.**

## ಇಂದು ರಾಣೇಬೆನ್ನೂರಿನಲ್ಲಿ ವಾರ್ಷಿಕೋತ್ಸವ

ಶ್ರೀ ಗಾಯತ್ರಿ ಸಮೂಹ ಹಾಗೂ ಸಮೂಹ ಶಿಕ್ಷಣ ಸಂಸ್ಥೆಗಳು ರಾಣೇಬೆನ್ನೂರು ಇವರ ಸಂಯುಕ್ತಾ ಶ್ರಯದಲ್ಲಿ ರಾಣೇಬೆನ್ನೂರಿನಲ್ಲಿ ಜರುಗಿದ ಕೋಟಿ ಗಾಯತ್ರಿ ಮಹಾ ಯಜ್ಞದ 17 ನೇ ವಾರ್ಷಿಕೋತ್ಸವ ಸಮಾರಂಭ ಇಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 1.30 ರವರೆಗೆ ನಗರದ ಬಿಎಜೆಎಸ್‌ಎಸ್ ಮಹಿಳಾ ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ಸಾಗತ ತಾಲ್ಲೂಕು ವೀರಾಪುರ ಹಿರೇಮಠದ ಶ್ರೀ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ರಾಣೇಬೆನ್ನೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಪ್ರಕಾಶಾನಂದಜಿ ಮಹಾರಾಜ್ ಸಾನ್ನಿಧ್ಯ ವಹಿಸಲಿದ್ದಾರೆ. ಪ್ರಧಾನ ಅರ್ಚಕ ಮಾದೇವ ಸ್ವಾಮಿ ಅಂಬಿಗ, ಡಾ.ಕೆ. ಸಿ. ನಾಗರತ್ನ, ಸುರೇಶ್ ಮೊಬಿನ್ ಮತ್ತಿತರರು ಭಾಗವಹಿಸಲಿದ್ದಾರೆ.

# ಜಗಳೂರು : ಕೆರೆಗಳ ಒತ್ತುವರಿ ತೆರವುಗೊಳಿಸಿ

## ತಾ.ಪಂ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚನೆ



ಜಗಳೂರು, ಜೂ. 3- ತಾಲ್ಲೂಕಿನಲ್ಲಿ ಕೆರೆಗಳನ್ನು ಒತ್ತುವರಿ ಮಾಡಿ ಮನೆ, ಕಟ್ಟಡಗಳನ್ನು ನಿರ್ಮಿಸಿಕೊಂಡಿರುವುದನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನ ಪ್ರತಿ ಕೆರೆಗಳ ಪಟ್ಟಿ ತಯಾರಿಸಬೇಕು. ಮಳೆಗಾಲದಲ್ಲಿ ನೀರು ಭರ್ತಿಯಾದ ವೇಳೆ ಹಿನ್ನೀರು ಮನೆಗಳಿಗೆ ನುಗ್ಗದಂತೆ ಟ್ರಂಚ್ ಹಾಕಿಸಬೇಕು. ಒಂದು ವೇಳೆ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಅವರನ್ನು ಸ್ಥಳಾಂತರಿಸಿ, ಸರ್ಕಾರಿ ಜಮೀನಿನಲ್ಲಿ ಅಥವಾ ಖಾಸಗಿ ಜಮೀನು ಖರೀದಿಸಿ ಶಾಶ್ವತ ನಿವೇಶನ, ಸೂರು ಕಲ್ಪಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದಲ್ಲಿ ಚರಂಡಿ ಸ್ವಚ್ಛತೆಗೊಳಿಸಬೇಕು. ಮಳೆಗಾಲದಲ್ಲಿ ಚರಂಡಿ ನೀರು ಯಾವುದೇ ಮನೆಗಳ ಮುಂಭಾಗ ಸಂಗ್ರಹವಾಗದೆ ಹೊರವಲಯಕ್ಕೆ ಸರಾಗವಾಗಿ ಹರಿದುಹೋಗಲು ವ್ಯವಸ್ಥೆ ಮಾಡಬೇಕು. ಕೆರೆ ಒತ್ತುವರಿ ಮಾಡಿರುವ ವಸತಿ ಕುಟುಂಬಗಳಿಗೆ ನೋಟೀಸ್ ನೀಡಿ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ಸೂಚನೆ ನೀಡಿದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಮಾತನಾಡಿ, ತಾಲ್ಲೂಕಿನ ಅಸಗೋಡು ಕೆರೆ ಪಕ್ಕದಲ್ಲಿ ಮಳೆಗೆ 10 ಮನೆಗಳು ಭಾಗಶಃ ಹಾನಿಗೊಳಗಾಗಿದ್ದು ತಲಾ 10 ಸಾವಿರ ರೂ. ಪರಿಹಾರ ನೀಡಲಾಗಿದೆ. ಬಿಳಿಚೋಡು ಹಳ್ಳ ಭರ್ತಿಯಾದ ವೇಳೆ ಜನತಾ ಬಡಾವಣೆಯಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ. ಹಿರೇಮಲ್ಲನಹೊಳೆ ಗ್ರಾಮದ ಕೆರೆ ಅಂಚಿನಲ್ಲಿ 40 ಕುಟುಂಬಗಳು ವಾಸವಾಗಿವೆ ಎಂದು ಮಾಹಿತಿ ನೀಡಿದರು.

**ಟಾಸ್ಕ್ ಫೋರ್ಸ್ ಸಮಿತಿ ರಚಿಸಿ:** ಗ್ರಾಮ ಮಟ್ಟದಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಜನ ಪ್ರತಿನಿಧಿಗಳು, ಎನ್‌ಜಿಓಗಳನ್ನೊಳಗೊಂಡ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಪ್ರಕೃತಿ ವಿಕೋಪದ ತುರ್ತು ಸಮಸ್ಯೆಗಳನ್ನು ಪರಿಹರಿಸಬೇಕು. ತಾಲ್ಲೂಕು ಹಂತದ ಸಹಾಯವಾಣಿ ಕೇಂದ್ರ ನಿರಂತರಾಗಿ ಚಾಲನೆಯಲ್ಲಿರಲಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿ.ಪಂ ಸಿಇಓ ಸುರೇಶ್ ಇಟ್ನಾಳ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ರಿಪೇರಿ, ಬೋರ್ ವೆಲ್ ದುರಸ್ತಿ, ಚೆಕ್ ಡ್ಯಾಂ ಗಳನ್ನು ಸ್ವಚ್ಛ ಗೊಳಿಸಬೇಕು. ಸಮರ್ಪಕ ಚರಂಡಿ ವ್ಯವಸ್ಥೆ ನಿರ್ಮಿಸಿ ಪ್ರಕೃತಿ ವಿಕೋಪಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಪಿಡಿಓ ಗಳಿಗೆ ಸೂಚನೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ ಮಾತನಾಡಿ, ಪಟ್ಟಣದಲ್ಲಿ ಸುಸಜ್ಜಿತ ಹಾಸ್ಟೆಲ್ ಕಟ್ಟಡಗಳಿದ್ದು ವಿದ್ಯಾರ್ಥಿಗಳ ವಸತಿಗೆ ಯಾವುದೇ ತೊಂದರೆಯಿಲ್ಲ. ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಸಂತೋಷ್ ಕುಮಾರ್, ತಾ.ಪಂ ಇಓ ಚಂದ್ರ ಶೇಖರ್ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅನುಷ್ಠಾನ ಅಧಿಕಾರಿಗಳು ಇದ್ದರು.

## ವಯೋವೃದ್ಧನ ಅಪಹರಣ: 20 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದ ಅರೋಪಿಗಳ ಬಂಧನ

ದಾವಣಗೆರೆ, ಜೂ. 3- ಇಲ್ಲಿನ ಅಂಬಿಕಾನಗರದ ಶೇಖರಪ್ಪ ಗೋದಾಮು ಬಳಿ ವಾಸಿಯಾದ ಲೋಕೇಶ್ (60) ವಯೋವೃದ್ಧರೊಬ್ಬರನ್ನು ಅಪಹರಿಸಿ, ಅವರಿಗೆ 20 ಲಕ್ಷ ರೂ. ಬೇಡಿಕೆ ಇಟ್ಟಿದ್ದ ಬಗ್ಗೆ ಅವರ ಪುತ್ರ ಕೆಟಿಜೆ ನಗರದಲ್ಲಿ ದೂರು ದಾಖಲಿಸಿದ್ದಾರೆ.

ಈ ಅಪಹರಣ ಪ್ರಕರಣವನ್ನು ಕೇವಲ 24 ಗಂಟೆಗಳಲ್ಲಿ ಬೇಧಿಸಿರುವ ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ಅಪಹರಣಕ್ಕೆ ಒಳಗಾಗಿದ್ದ ಲೋಕೇಶ್ ಅವರನ್ನೂ ಸಹ ರಕ್ಷಿಸಿದ್ದು, ಈ ಕೃತ್ಯಕ್ಕೆ ಬಳಸಿದ್ದ ಇಟಿಯೋಸ್ ಕಾರು ಹಾಗೂ ಯಮಹಾ ಬೈಕ್ ವಶಪಡಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ನಿಟುವಳ್ಳಿಯ ಸಾಗರ್, ನಂದಿಹಳ್ಳಿ ಗ್ರಾಮದ ಯುವರಾಜ, ಸುಂದರನಾಯ್ಕ, ದಾವಣಗೆರೆಯ ಚೇತನ್ ಕುಮಾರ್ ಹಾಗೂ ಓರ್ವ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿದಂತೆ ಐವರನ್ನು ಚನ್ನಗಿರಿ ತಾಲ್ಲೂಕು ಅಂತಪುರ ಗ್ರಾಮದ ಬಳಿ ದಸ್ತಗಿರಿ ಮಾಡಿದ್ದು, ತನಿಖೆಯನ್ನು ಮುಂದುವರೆಸಿದ್ದಾರೆ.

ಆರೋಪಿತರ ಪತ್ತೆ ಹಾಗೂ ಅಪಹರಣಕ್ಕೆ ಒಳಗಾದ ವೃದ್ಧರನ್ನು ರಕ್ಷಿಸುವ ಯಶಸ್ವೀ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಕೆಟಿಜೆ ನಗರ ಠಾಣೆಯ ಸಿಪಿಐ ಯು.ಜಿ.ಶ್ರೀಧರ್, ಸಂಚಾರ ವೃತ್ತ ನಿರೀಕ್ಷಕ ಅನಿಲ್, ಬಸವನಗರ ಠಾಣೆಯ ನಿರೀಕ್ಷಕ ಆರ್.ಆರ್. ಪಾಟೀಲ್, ಚನ್ನಗಿರಿ ನಿರೀಕ್ಷಕ ಮಹೇಶ್ ನೇತೃತ್ವದಲ್ಲಿ ಕೆಟಿಜೆ ನಗರ ಪಿಎಸ್‌ಐ ಎಸ್.ಆರ್.ಕಾಟೆ, ಸಿಬ್ಬಂದಿಗಳಾದ ಪ್ರಕಾಶ್, ಶಂಕರ್ ಜಾಧವ್, ಮಂಜಪ್ಪ, ಷಣ್ಮುಖ, ರವಿ ಲಮಾಣಿ, ಶಿವರಾಜ್, ಮಂಜುನಗೌಡ, ಬಿ.ಆರ್. ರವಿ, ಬಸವರಾಜ್, ಹರೀಶ್ ನಾಯ್ಕ, ತಿಮ್ಮಣ್ಣ ಎನ್.ಆರ್., ಶ್ರೀನಿವಾಸ, ರಾಘವೇಂದ್ರ, ಶಾಂತರಾಜ್, ಡಿಸಿಐಬಿ ಘಟಕದ ಸಿಬ್ಬಂದಿ ಬಾಲಾಜಿ, ರಾಘವೇಂದ್ರ, ರಮೇಶ್, ಮಜೀದ್, ನಟರಾಜ್, ಮಲ್ಲಿಕಾರ್ಜುನ, ಮಾರುತಿ, ಅಶೋಕ, ಆಂಜನೇಯ, ಸುರೇಶ್ ಅವರನ್ನು ಎಸ್ಪಿ ಡಾ. ಕೆ. ಅರುಣ್ ಅಭಿನಂದಿಸಿದ್ದಾರೆ.

## ಸುಲಿಗೆ ಪ್ರಕರಣದಲ್ಲಿ ಮೂವರ ಬಂಧನ : 1.70 ಲಕ್ಷ ರೂ. ಮೌಲ್ಯದ ಸ್ವತ್ತುಗಳ ವಶ

ದಾವಣಗೆರೆ, ಜೂ.3- ಆವರಗೆರೆಯಿಂದ ಬಾಡಾ ಕ್ರಾಸ್ ಅಂಡರ್ ಬ್ರಿಡ್ಜ್ ಕಡೆಗೆ ಹೋಗುವ ಸರ್ವೀಸ್ ರಸ್ತೆಯಲ್ಲಿ ನಿಂತಿದ್ದ ವ್ಯಕ್ತಿಯಿಂದ ಮೊಬೈಲ್ ಹಾಗೂ ನಗದು ಸುಲಿಗೆ ಮಾಡಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಹೆಚ್.ಸಿ ಸಂದೀಪ್ (24) ಐಗೂರು ಗ್ರಾಮ, ಪ್ರವೀಣ್‌ಕುಮಾರ್(34) ದೇವರಾಜ ಅರಸು ಬಡಾವಣೆ, 'ಬಿ' ಬ್ಲಾಕ್, ಅವಿನಾಶ್ ಎ. (30) ಡೆಂಟಲ್ ಕಾಲೇಜ್ ರಸ್ತೆ, ಎಂಸಿಸಿ 'ಬಿ' ಬ್ಲಾಕ್ ದಾವಣಗೆರೆ ಇವರು ಬಂಧಿತರು.

ಬಂಧಿತ ಆರೋಪಿಗಳಿಂದ ಸುಲಿಗೆ ಮಾಡಲಾಗಿದ್ದ 10 ಸಾವಿರ ರೂ. ಮೌಲ್ಯದ ಇನ್ಫಿನಿಟಿ ಮೊಬೈಲ್, 200 ರೂ. ನಗದು ಹಾಗೂ ಮತ್ತೊಂದು ಸ್ಥಳದಲ್ಲಿ ಕಿತ್ತುಕೊಂಡು ಹೋಗಿದ್ದ 10 ಸಾವಿರ ಬೆಲೆಯ ವಿವೋ ಕಂಪನಿ ಮೊಬೈಲ್, ಕೃತ್ಯಕ್ಕೆ ಉಪಯೋಗಿಸಿದ ಡಿಯೋ ಸ್ಕೂಟರ್, ಪ್ಯಾಸೆಂಜರ್ ಆಟೋ ಸೇರಿ ಒಟ್ಟು 1.70 ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ರಾತ್ರಿ 8 ಗಂಟೆ ಸಮಯದಲ್ಲಿ ಬಾಡಾ ಕ್ರಾಸ್ ಬಳಿಯ ಸರ್ವೀಸ್ ರಸ್ತೆಯಲ್ಲಿ ಯಾರೋ ಮೂವರು ವ್ಯಕ್ತಿಗಳು ಮೊಬೈಲ್ ಹಾಗೂ 500 ರೂ. ಹಣ ಸುಲಿಗೆ ಮಾಡಿಕೊಂಡು ಹೋದ ಬಗ್ಗೆ ಸಂಜು ಎಂಬುವವರು ಕಳೆದ ಮೇ 31ರಂದು ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

## ನಗರದಲ್ಲಿ ಇಂದು ಕೆರಿಯರ್ ಕೌನ್ಸೆಲಿಂಗ್

ದಿ ಹಿಂದೂ ಎಜುಕೇಶನ್ ಪ್ಲಸ್ ವೃತ್ತಿ ಕೌನ್ಸೆಲಿಂಗ್ -2023 ಕಾರ್ಯಕ್ರಮವನ್ನು ಜಿ.ಎಂ.ಐ.ಟಿ. ಕಾಲೇಜಿನ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ಇಂದು ನಡೆಸಲಾಗುವುದು.

ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ರವರೆಗೆ ಮುಖ್ಯ ಕಾರ್ಯಕ್ರಮ ನಡೆಯಲಿದ್ದು, ಪ್ರವೇಶ ಉಚಿತವಾಗಿರುತ್ತದೆ. ಕಾರ್ಯಕ್ರಮವು 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಮತ್ತು ಪದವಿ ಪೂರ್ವ ತರಗತಿಗಳ ಕೋರ್ಸ್‌ಗಳಿಗೆ ಮತ್ತು ಅವರ ಪೋಷಕರಿಗೆ ತೆರೆದಿರುತ್ತದೆ.

ವೃತ್ತಿ ಅವಕಾಶಗಳನ್ನು ಅನ್ವೇಷಿಸಲು, ಕೈಗಾರಿಕಾ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿವಿಧ ಕ್ಷೇತ್ರಗಳಲ್ಲಿ ಭವಿಷ್ಯದ ಭವಿಷ್ಯಗಳ ಬಗ್ಗೆ ಒಳನೋಟಗಳನ್ನು ಪಡೆಯಲು ಒಂದು ಅನನ್ಯ ಅವಕಾಶವನ್ನು ನೀಡಲಾಗುತ್ತಿದೆ.

ದಿ ಹಿಂದೂ-ಎಜುಕೇಷನ್ ಪ್ಲಸ್ ಪ್ರಕಟಿಸಿದ ವೃತ್ತಿ ಕೈಪಿಡಿಯ ಪ್ರತಿಯನ್ನು ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಉಚಿತವಾಗಿ ವಿತರಿಸಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ : 9886051030, 9845095781.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಜೂ.3- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಇದೇ ದಿನಾಂಕ 8 ರಂದು ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗೆ 45 ದಿನಗಳ ತರಬೇತಿಯನ್ನು ಆಯೋಜಿಸಲಾಗಿದೆ.

ಆಸಕ್ತರು ಜೂ.7 ರೊಳಗಾಗಿ ಮೈಸೂರಿನಲ್ಲಿರುವ ಕೇಂದ್ರ ಕಚೇರಿಯಲ್ಲಿ ಹೆಸರು ನೊಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 0821-2515944 / 9964760090.

## ನೆನೆಗುದಿಗೆ ಬಿದ್ದಿರುವ ಭೇರನಪಾದ ನೀರಾವರಿ ಯೋಜನೆ ಜಾರಿಗೆ ಒತ್ತಾಯ



ಮಲೇಬೆನ್ನೂರು, ಜೂ.2- ಹರಿಹರ ಕ್ಷೇತ್ರದಲ್ಲಿ ನೆನೆಗುಂದಿಗೆ ಬಿದ್ದಿರುವ ಭೈರನಪಾದ ಏತ ನೀರಾವರಿ ಯೋಜನೆ ಜಾರಿ ಗೊಳಿಸುವಂತೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರನ್ನು ಶುಕ್ರವಾರ ಬೆಂಗಳೂರಿನಲ್ಲಿ ಭೇಟಿ ಮಾಡಿ, ಮನವಿ ಮಾಡಿದರು. ಯೋಜನೆ ಕುರಿತು ಸಮಗ್ರ ಚರ್ಚೆಯನ್ನು ನಡೆಸಿದ ನೀರಾವರಿ ಸಚಿವರೂ ಆದ ಡಿ.ಕೆ.ಶಿವಕುಮಾರ್ ಅವರು ಈ ವಿಷಯವನ್ನು ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿದ್ದಾರೆ. ನನ್ನ ಮನವಿ ಪತ್ರವನ್ನು ಇಲಾಖೆಯ ಮುಖ್ಯ ಕಾರ್ಯದರ್ಶಿಯವರಿಗೆ ರವಾನಿಸಲಾಯಿತು ಎಂದು ನಂದಿಗಾವಿ ಶ್ರೀನಿವಾಸ್ ತಿಳಿಸಿದ್ದಾರೆ.

## ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ವಿಶೇಷ ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ ಇಂದು ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಶ್ರೀಮತಿ ನಂದಿನಿ ಶ್ರೀ ಪ್ರಶಾಂತ್, ಚಿ|| ಆಹನ ಹಾಗೂ ಸಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಕುರಿ, ಮೇಕೆ ಸಾಕಾಣಿಕೆ ತರಬೇತಿ


ದಾವಣಗೆರೆ, ಜೂ.3- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಾಳೆ ದಿನಾಂಕ 5 ಮತ್ತು 6 ರಂದು 25 ಜನ ರೈತರಿಗೆ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ 08192-233787.

## ಹೆಬ್ಬಾಳು ಗ್ರಾಮದ ಕಮಲಮ್ಮ ನಿಧನ



ದಾವಣಗೆರೆ ತಾಲ್ಲೂಕು, ಹೆಬ್ಬಾಳು ಗ್ರಾಮದ ವಾಸಿ ಹಳವುದರ ದಿ. ಶ್ರೀ ಸಿದ್ದಪ್ಪನವರ ಧರ್ಮಪತ್ನಿ ಶ್ರೀಮತಿ ಕಮಲಮ್ಮ ಇವರು ದಿನಾಂಕ 3.6.2023ರ ಶನಿವಾರ ಸಂಜೆ 4ಕ್ಕೆ ನಿಧನರಾಗಿರುತ್ತಾರೆ. ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.6.2023ರ ಭಾನುವಾರ ಮಧ್ಯಾಹ್ನ 12ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮದಲ್ಲಿ ನೆರವೇರಲಿದೆ.

## ಕಬ್ಬಿಣದ ಗೇಟ್ ಬಿದ್ದು 11 ವರ್ಷದ ಬಾಲಕ ಸಾವು



ದಾವಣಗೆರೆ, ಜೂ.3- ಮನೆ ಮುಂಭಾಗದಲ್ಲಿ ಕಾಂಪೌಂಡ್‌ಗೆ ನಿರ್ಮಿಸಲಾಗಿದ್ದ ಕಬ್ಬಿಣದ ಗೇಟ್ ಬಿದ್ದ ಪರಿಣಾಮ ನಾಗಾರ್ಜುನ ಎಂಬ 11 ವರ್ಷದ ಬಾಲಕ ಮೃತಪಟ್ಟ ಘಟನೆ ಶುಕ್ರವಾರ ರಾತ್ರಿ ಬಸಾಪುರ ಗ್ರಾಮದಲ್ಲಿ ನಡೆದಿದೆ. ಬಸಾಪುರ ಗ್ರಾಮದ ಪುರೋಹಿತರ ಕೆಲಸ ಮಾಡುವ ಗುರುಶಾಂತಯ್ಯ ಎಂಬುವರ ಮಗ ನಾಗಾರ್ಜುನ್ ಮೃತ ಬಾಲಕ. 6ನೇ ತರಗತಿ ಓದುತ್ತಿದ್ದ ಈತ ಜೂ.2ರ ಶುಕ್ರವಾರ ರಾತ್ರಿ ಮನೆಯಲ್ಲಿ ಊಟ ಮಾಡಿ ಗೆಳೆಯರೊಂದಿಗೆ ಆಟವಾಡಲು ಹೊರ ಹೋಗಿದ್ದಾನೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಹತ್ತಿರುವ ಇರುವ ಸಿದ್ದಪ್ಪ ಅವರ ಮನೆಯ ಕಾಂಪೌಂಡ್ ಗೇಟ್ ಶಿಥಿಲಗೊಂಡು ಬೀಳುವ ಸ್ಥಿತಿಯಲ್ಲಿದ್ದು, ಅಲ್ಲಿ ಆಟವಾಡಲು ಹೋಗಿದ್ದಾಗ ಗೇಟ್ ಬಿದ್ದು ಮುಖಕ್ಕೆ ಹಾಗೂ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು ಮೃತಪಟ್ಟಿದ್ದಾನೆ. ಈ ಕುರಿತು ಗುರುಶಾಂತಯ್ಯ ಅವರು ಆರ್.ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಅತ್ಯಾಚಾರ ಪ್ರಕರಣ : ಜಾತಕ ಪರಿಶೀಲನೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ

ನವದೆಹಲಿ, ಜೂ. 3 - ಅತ್ಯಾಚಾರಕ್ಕೀಡಾದ ಮಹಿಳೆ ಮಂಗಳೀಕ ದೋಷ ಹೊಂದಿದ್ದಾರೆಯೇ ಎಂಬ ಬಗ್ಗೆ ಪರಿಶೀಲಿಸುವಂತೆ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ವಿಚಿತ್ರ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಕಳೆದ ಮೇ 23ರಂದು ಆದೇಶವೊಂದನ್ನು ಹೊರಡಿಸಿದ್ದ ಹೈಕೋರ್ಟ್, ಮಹಿಳೆ ಮಂಗಳೀಕ ದೋಷ ಹೊಂದಿದ್ದಾರೆಯೇ ಎಂಬ ಬಗ್ಗೆ ಲಖ್ನೌ ವಿಶ್ವವಿದ್ಯಾನಿಲಯದ ಜ್ಯೋತಿಷ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರು ಪರಿಶೀಲಿಸಬೇಕು ಎಂದು ತಿಳಿಸಿತ್ತು.

ಮದುವೆಯ ಭರವಸೆ ನೀಡಿ ಅತ್ಯಾಚಾರ ಎಸಗಲಾಗಿದೆ ಎಂದು ಮಹಿಳೆ ದೂರು ನೀಡಿದ್ದರು. ಆದರೆ, ಆರೋಪ ತಳ್ಳಿ ಹಾಕಿದ್ದ ವ್ಯಕ್ತಿ, ಮಹಿಳೆ ಮಂಗಳೀಕ ದೋಷ ಹೊಂದಿರುವ ಕಾರಣ ಮದುವೆ ಸಾಧ್ಯವಾಗಿರಲಿಲ್ಲ ಎಂದಿದ್ದರು. ಮಂಗಳ ದೋಷ ಹೊಂದಿರುವ ಮಹಿಳೆಯರು ಮಂಗಳ ದೋಷ ಹೊಂದಿಲ್ಲದೇ ಇರುವವರನ್ನು ಮದುವೆಯಾದರೆ ಕೆಡಕಾಗುತ್ತದೆ ಎಂಬ ನಂಬಿಕೆ ಕೆಲವರಲ್ಲಿದೆ.

ಈ ಬಗ್ಗೆ ಸ್ವಯಂ ಪ್ರೇರಿತ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ರಜೆ ಅವಧಿಯ ಪೀಠ, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಹೊರಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದ ಉಭಯರು ನ್ಯಾಯಾಲಯಕ್ಕೆ ಜಾತಕ ಸಲ್ಲಿಸಬೇಕು. ಮಹಿಳೆ ಮಂಗಳೀಕ ದೋಷ ಹೊಂದಿರುವ ಬಗ್ಗೆ ಪರಿಶೀಲಿಸಬೇಕು ಎಂದು ಹೈಕೋರ್ಟ್ ಏಕೆ ತಿಳಿಸಿದೆಯೋ ಅರ್ಥವಾಗುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಶಾಮನೂರು ಅಜ್ಜಪ್ಪ ಅಶೋಕ್ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ದಿ. ಅಜ್ಜಪ್ಪ ಸಿದ್ದಪ್ಪ ಅವರ ಪುತ್ರ

**ಅಜ್ಜಪ್ಪ ಅಶೋಕ್**

ಅವರು ದಿನಾಂಕ 03.06.2023ರ ಶನಿವಾರ ರಾತ್ರಿ 9.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 42 ವರ್ಷ ವಯಸ್ಸಾಗಿತ್ತು. ತಾಯಿ, ಮೂವರು ಸಹೋದರಿಯರು, ಸಹೋದರರು, ಅಳಿಯಂದಿರು, ಚಿಕ್ಕಪ್ಪಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.06.2023ರ ಮಧ್ಯಾಹ್ನ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಅಜ್ಜಪ್ಪ ವಂಶಸ್ಥರು**

**ಮೊ. 99862-83222, 97396-90817**


## ಸಾರ್ವಜನಿಕ ತಿಳುವಳಿಕೆಗಾಗಿ ನೋಟಿಸ್

ನಮ್ಮ ಕಕ್ಷಿದಾರರಾದ ಜ್ಯೋತಿ ಕೋಂ ಸಂದೀಪ್ ಜೈನ್, ವಯಾ:36 ವರ್ಷ, ಉದ್ಯೋಗ : ಗೃಹಿಣಿ, ಸಾ: ದಾವಣಗೆರೆ, ಪಿ.ಜೆ. ಬಡಾವಣೆ, ನಂ. 202, ಶೀತಲ್ ಪ್ಯಾರಾಡೈಸ್ ಅಪಾರ್ಟ್‌ಮೆಂಟ್, 3ನೇ ಮುಖ್ಯ ರಸ್ತೆ, 4ನೇ ಕ್ರಾಸ್, ದಾವಣಗೆರೆ-577 002. ಇವರು ದಾವಣಗೆರೆ ಜಿಲ್ಲೆ, ಕಸಬಾ ಹೋಬಳಿಯಲ್ಲಿರುವ ಕುಂದವಾಡ ಗ್ರಾಮದ ರಿ.ಸ.ನಂ. 262/15, ಕ್ಷೇತ್ರ :೧೦ ಗುಂಟೆ ಪೂರ್ತಿಯಾಗಿ ಮತ್ತು ಕುಂದವಾಡ ಗ್ರಾಮದ ರಿ.ಸ. ನಂ. 262/16, ಒಟ್ಟು ಕ್ಷೇತ್ರ : 10 ಗುಂಟೆ ನೇದ್ದರಲ್ಲಿಯ, ಉತ್ತರ ಭಾಗದ 5 1/2 ಗುಂಟೆ ಜಮೀನು, ಈ ಎರಡೂ ಭೂಮಿಗಳು ಪರಸ್ಪರ ಅಕ್ಕಪಕ್ಕದಲ್ಲಿ ಇರುವುದರಿಂದ ಸಾಮಾನ್ಯ ಚಕ್ಕುಬಂದಿ ಮಧ್ಯೆದಲ್ಲಿ ಇದ್ದು, ಅಂದರೆ ಪೂರ್ವಕ್ಕೆ : ಶಿವಕುಮಾರ ಇವರ ಆಸ್ತಿ, ಪಶ್ಚಿಮಕ್ಕೆ : ರಾಮಚಂದ್ರಪ್ಪ ಇವರ ಜಮೀನು, ಉತ್ತರಕ್ಕೆ : ಮೋಹನ್.ಎಸ್. ಬಿನ್ ಲೇಟ್ ಪಿ. ಶಿವಮೂರ್ತಪ್ಪ ಇವರ ಆಸ್ತಿ, ದಕ್ಷಿಣಕ್ಕೆ : ರಿ.ಸ. ನಂ. 262/16 ನೇದ್ದರಲ್ಲಿಯ ಇನ್ನುಳಿದ ಶಾರದಮ್ಮನವರ ಜಮೀನು ಈ ಚಕ್ಕುಬಂದಿ ಮಧ್ಯೆದಲ್ಲಿರುವ ಆಸ್ತಿಗಳನ್ನು, ಅವುಗಳ ಈಗಿನ ಮಾಲೀಕರು ವ ಕಬ್ಜಾದಾರರಾದ 1) ಶಿವಮ್ಮ ಕೋಂ ಲೇಟ್ ಪಿ. ಶಿವಮೂರ್ತೆಪ್ಪ, ಸಾ: ಕುಂದುವಾಡ, ತಾ.ಜಿ. ದಾವಣಗೆರೆ 2) ಶಾರದಮ್ಮ ಬಿನ್ ಲೇಟ್ ಪಿ. ಶಿವಮೂರ್ತೆಪ್ಪ ಉರ್ಫ್ ಶಾರದಮ್ಮ ಕೋಂ ಸುಭಾಶ್ಚಂದ್ರ, ಸಾ: ಕವಲೆತ್ತು, ತಾ: ರಾಣೇಬೆನ್ನೂರು, ಜಿ: ಹಾವೇರಿ ಇವರಿಂದ ಖರೀದಿ ಹಿಡಿಯುವ ಕುರಿತು ಒಪ್ಪಂದ ಮಾಡಿಕೊಂಡಿದ್ದು, ಸದರಿ ಜಮೀನುಗಳ ಖರೀದಿ ಪತ್ರವನ್ನು ನೋಂದಾಯಿಸಿಕೊಳ್ಳುವವರಿದ್ದಾರೆ.

ಕಾರಣ, ಸಾರ್ವಜನಿಕರ ಗಮನಕ್ಕೆ ಮತ್ತು ಸದರಿ ಆಸ್ತಿಯನ್ನು ಯಾವುದೇ ರೀತಿಯಿಂದ ಹಿತಾಸಕ್ತಿಯುಳ್ಳಂತಹ ಜನರಿದ್ದರೆ ಅವರ ಗಮನಕ್ಕೆ, ಈ ನೋಟಿಸಿನ ಮೂಲಕ ತಿಳಿಸುವುದೇನೆಂದರೆ, ಯಾರಾದರೂ ಯಾವುದೇ ತರಹದ ಹಕ್ಕು ಬಾಧ್ಯತೆಯನ್ನು ಸದರಿ ಜಮೀನುಗಳಲ್ಲಿ ಹೊಂದಿದ್ದಲ್ಲಿ, ಅದಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳ ಸಮೇತರಾಗಿ ಈ ಕೆಳಗೆ ನಮೂದಿಸಿದ ನಮ್ಮ ವಿಳಾಸದಲ್ಲಿ ನಮ್ಮನ್ನು ಸಂಪರ್ಕಿಸಿ ಆ ಬಗ್ಗೆ ಲೇಖಿ ಪಡೆಯೋಣವಾಗಬೇಕು ಮತ್ತು ಸಂಪರ್ಕಿಸುವವರು, ಯಾವು ರೀತಿಯಿಂದ ಸದರಿ ಆಸ್ತಿಗಳಲ್ಲಿ ಹಿತಾಸಕ್ತಿಯುಳ್ಳವರು ಇರುತ್ತಾರೆ ಅನ್ನುವ ಬಗ್ಗೆ ದಾಖಲಾತಿಗಳ ಸಹಿತವಾಗಿ ನಮಗೆ ಲೇಖಿ ಸಲ್ಲಿಸೋಣವಾಗಬೇಕು. ಒಂದು ವೇಳೆ ಯಾರಾದರೂ ಯಾವುದೇ ಆಕ್ಷೇಪಣೆಗಳನ್ನು ಈ ನೋಟಿಸ್ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸದಿದ್ದಲ್ಲಿ ನಮ್ಮ ಕಕ್ಷಿದಾರಳು ಸದ್ಭಾವನೆಯುಕ್ತ ಖರೀದಿದಾರಳಾಗುತ್ತಾಳೆ. ಅಂತಾ ಪ್ರಕಟಿಸಿದ ಸಾರ್ವಜನಿಕ ನೋಟಿಸ್.

ಸಹಿ/- ಪಿ.ಆರ್. ಹಿತ್ತಲಮನಿ, ವಕೀಲರು
ನಂ. 65, "ಪೃಥ್ವಿ-ದೀಪ", 1ನೇ ಕ್ರಾಸ್, ರಾಜ-ರಾಜೇಶ್ವರಿ ನಗರ, ರಾಜೇಶ್ವರಿ ಪಾರ್ಕ್ ಎದುರಿಗೆ, ರಾಣೇಬೆನ್ನೂರು-581115.

ಸ್ಥಳ : ರಾಣೇಬೆನ್ನೂರು.
ದಿನಾಂಕ : 13.05.2023



## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ. ಕರಾಸಾ/ದಾವಿ/ಸಂಚಾರ/ವಾಣಿಜ್ಯ/652/2023-24 ದಿನಾಂಕ : 03/06/2023

**"ಮ್ಯಾನ್ಯುಯಲ್ ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ : 01/2023-24"**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ಜಗಳೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ-01 ಕ್ಕೆ (ಪರಿಶಿಷ್ಟ ಜಾತಿ) (ಶಾಶ್ವತ ಸ್ಥಳ 05 ವರ್ಷ) ಪರವಾನಗಿದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮಲೆಬೆನ್ನೂರು ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ-1ಕ್ಕೆ (ಶಾಶ್ವತ ಸ್ಥಳ 05 ವರ್ಷ) ಹಾಗೂ ಹರಿಹರ ಬಸ್ ನಿಲ್ದಾಣದ ದ್ವಿ-ಚಕ್ರ ವಾಹನ ನಿಲ್ದಾಣಕ್ಕೆ (ಪರಿಶಿಷ್ಟ ಜಾತಿ) (ತೆರೆದ ಸ್ಥಳ 03 ವರ್ಷ) ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ : 03.06.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ-577 002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ಅಧೀಕ್ಷಕರು - 7022030183.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಬೆಂ.ನಗರ/169/ಆಕಾರ್/2023-24


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


ಹೃದಯಪೂರ್ವಕ ಅಭಿನಂದನೆಗಳು
ಕರ್ನಾಟಕದ ನೂತನ ಸರ್ಕಾರದಲ್ಲಿ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಖಾತೆ ಸಚಿವರಾಗಿ ಮತ್ತು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ದೂರದೃಷ್ಟಿಯ ನಾಯಕ, ಅಭಿವೃದ್ಧಿಯ ಹರಿಕಾರರೂ ಆದ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ಮತ್ತು
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಚುನಾಯಿತಗೊಂಡಿರುವ ಹಿರಿಯ ಮುತ್ಸದ್ದಿಗಳೂ, ದಾನಿಗಳೂ ಆಗಿರುವ
ಡಾ॥ ಶಾಮನೂರು ಶಿವಶಂಕರಪ್ಪ ಅವರಿಗೂ
ಮಾಯಕೊಂಡ ಕ್ಷೇತ್ರದ ಶ್ರೀ ಕೆ. ಬಸವಂತಪ್ಪ ಅವರಿಗೂ, ಹೊನ್ನಾಳಿ ಕ್ಷೇತ್ರದ ಶ್ರೀ ಶಾಂತನಗೌಡ ಅವರಿಗೂ,
ಹಾಗೂ ಚನ್ನಗಿರಿ ಕ್ಷೇತ್ರದ ಶ್ರೀ ಶಿವಗಂಗಾ ಬಸವರಾಜ್ ಅವರಿಗೂ,
ಹಾಗೂ ಜಗಳೂರು ಕ್ಷೇತ್ರದ ಶ್ರೀ ಬಿ. ದೇವೇಂದ್ರಪ್ಪ ಅವರಿಗೂ,
ಹೃದಯಪೂರ್ವಕ ಅಭಿನಂದನೆಗಳು.
ಶ್ರೀ ಕೆ.ಹೆಚ್. ಷಣ್ಮುಖಪ್ಪ
ನಿರ್ದೇಶಕರು
ಶ್ರೀ ಕೆ. ಚಂದ್ರಣ್ಣ
ನಿರ್ದೇಶಕರು
ಶ್ರೀ ಕೆ.ಆರ್. ಗಂಗರಾಜು
ನಿರ್ದೇಶಕರು
ಶ್ರೀ ಎ. ಅಜ್ಮಲ್‌ಖಾನ್
ನಿರ್ದೇಶಕರು
ಶ್ರೀ ವಿ. ಮಂಜುನಾಥ್
ನಿರ್ದೇಶಕರು
ಜಿ.ಡಿ. ಗುರುಸ್ವಾಮಿ ಗಂಗನಕಟ್ಟೆ
ಅಧ್ಯಕ್ಷರು
ಶ್ರೀ ಎ. ಮಾರುತಿ
ನಿರ್ದೇಶಕರು
ಶ್ರೀ ಪಿ.ಹೆಚ್. ಶಿವಕುಮಾರ್
ನಿರ್ದೇಶಕರು
ಶ್ರೀಮತಿ ಅಮ್ರೀನ್
ನಿರ್ದೇಶಕರು
ಶ್ರೀಮತಿ ನಂದಿತ ಡಿ.ಎಂ.
ನಿರ್ದೇಶಕರು
ಶ್ರೀ ಬಿ. ನಾಗರಾಜ
ಪ್ರಧಾನ ವ್ಯವಸ್ಥಾಪಕರು
ಶಿವಕುಮಾರ್
ವ್ಯವಸ್ಥಾಪಕರು
ಎನ್.ಬಿ. ಮಲ್ಲಿಕಾರ್ಜುನ್
ಮಾರಾಟ ಸಹಾಯಕರು
ಹೆಚ್. ತಿಪ್ಪೇಸ್ವಾಮಿ
ಉಪಾಧ್ಯಕ್ಷರು
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆ ನಿಯಮಿತ, ಜನತಾ ಬಜಾರ್, ದಾವಣಗೆರೆ.


ಹೃದಯಪೂರ್ವಕ ಅಭಿನಂದನೆಗಳು
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಖಾತೆ ಸಚಿವರಾಗಿ ಮತ್ತು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಅಭಿವೃದ್ಧಿಯ ಹರಿಕಾರರೂ ಆದ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೂ
ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಚುನಾಯಿತಗೊಂಡಿರುವ
ಹಿರಿಯ ಮುತ್ಸದ್ದಿಗಳೂ, ದಾನಿಗಳೂ ಆಗಿರುವ
ಡಾ॥ ಶಾಮನೂರು ಶಿವಶಂಕರಪ್ಪ ಅವರಿಗೂ
ಹಾಗೂ ಮಾಯಕೊಂಡ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾಗಿರುವ
ಶ್ರೀ ಕೆ. ಬಸವಂತಪ್ಪ ಅವರಿಗೂ
ಹೃದಯಪೂರ್ವಕ ಅಭಿನಂದನೆಗಳು.
ಬಿ.ಎಸ್. ಭರಮಪ್ಪ
ಮಳಲ್ಕೆರೆ, ಅಧ್ಯಕ್ಷರು
ರವಿ ಬಾಡ
ಕಾರ್ಯಾಧ್ಯಕ್ಷರು
ಲೋಕೇಶ್ ಕೊಲ್ಕುಂಟೆ
ಜಿಲ್ಲಾ ಕಾರ್ಯದರ್ಶಿ
ಕೊಟ್ರೇಶನಾಯ್ಕ
ಉಪಾಧ್ಯಕ್ಷರು
ಸದಾನಂದ
ಜಿಲ್ಲಾ ಖಜಾಂಚಿ
ಕರಿಬಸಪ್ಪ
ಕಾರ್ಯದರ್ಶಿ
ಗಂಗಾಧರ
ಸಹ ಕಾರ್ಯದರ್ಶಿ
ಸಿ. ವೆಂಕಟೇಶನಾಯ್ಕ
ಅಧ್ಯಕ್ಷರು (ನಗರ)
ಎಂ.ಎನ್. ನಾಗರಾಜ್
ಜಿಲ್ಲಾ ಉಪಾಧ್ಯಕ್ಷರು
ಕೆ.ಆರ್. ಗಂಗರಾಜು
ಜಿಲ್ಲಾ ಉಪಾಧ್ಯಕ್ಷರು
ಇ. ಬಸವರಾಜ್
ಜಿಲ್ಲಾ ಕಾರ್ಯದರ್ಶಿ
ವೀರಣ್ಣ ಯರಗುಂಟೆ
ನಗರ ಉಪಾಧ್ಯಕ್ಷರು
ಎನ್.ಆರ್. ರವಿ
ಕಾರ್ಯದರ್ಶಿ
ಎಸ್.ಎಂ. ರುದ್ರೇಶ್
ಜಿಲ್ಲಾ ಸಹ ಕಾರ್ಯದರ್ಶಿ
ಜಿ.ಡಿ. ಗುರುಸ್ವಾಮಿ ಗಂಗನಕಟ್ಟೆ
ಜಿಲ್ಲಾಧ್ಯಕ್ಷರು
ಅಧ್ಯಕ್ಷರು, ಜನತಾ ಬಜಾರ್, ದಾವಣಗೆರೆ.
ದಾವಣಗೆರೆ ಗ್ರಾಮಾಂತರ ಹಾಗೂ ನಗರ ಪಡಿತರ ವಿತರಕರ ಸಂಘ (ರಿ.), ದಾವಣಗೆರೆ ಜಿಲ್ಲೆ.

# ಬಂಗಾರದ ಒಡವೆ ಹಾಕಿದ್ದೀರಾ? ನಕಲಿ ಪೊಲೀಸರಿದ್ದಾರೆ ಎಚ್ಚರ !

ದಾವಣಗೆರೆ, ಜೂ. 3- ನಕಲಿ ಪೊಲೀಸರ ಹಾವಳಿ ಮತ್ತೆ ಶುರುವಾಗಿದೆ. ನಾವು ಪೊಲೀಸರು, ನಿಮ್ಮ ಮೇಲಿನ ಆಭರಣ, ಒಡವೆಯನ್ನು ನಮ್ಮ ಕಡೆ ಕೊಡಿ, ಪೇಪರ್‌ನಲ್ಲಿ ಸುತ್ತಿ ಕೊಡುತ್ತೇವೆ. ಇಲ್ಲಿ ಕಳ್ಳತನಗಳು ಹೆಚ್ಚಾಗಿವೆ ಎಂದು ಹೇಳಿ, ಒಡವೆ ಪಡೆದು, ನಕಲಿ ಆಭರಣ ಕೊಟ್ಟು ವಂಚಿಸುವ ಜಾಲ ಮತ್ತೆ ಜಾಗೃತಗೊಂಡಿದೆ. ಶುಕ್ರವಾರ ಒಂದೇ ದಿನ ಇಂತಹ ಮೂರು ಪ್ರಕರಣಗಳು ದಾಖಲಾಗಿವೆ.

**ಡಿ.ಸಿ. ಸಾಹೇಬರು ಬಂದಿದ್ದಾರೆ:** ನಾವು ಪೊಲೀಸರು, ಡಿಸಿ ಸಾಹೇಬರು ಬಂದಿದ್ದಾರೆ. ನಿಮ್ಮನ್ನು ಕರೆಯುತ್ತಿದ್ದಾರೆ ಎಂದು ಕರೆದುಕೊಂಡು ಹೋಗಿ, ಎತ್ತರ ಹಾಗು ದಪ್ಪವಾಗಿದ್ದ ವ್ಯಕ್ತಿಯನ್ನು ತೋರಿಸಿ ಇವರು ಡಿಸಿ ಸಾಹೇಬರು. ಇವರು ಹೊಸ ರೂಲ್ಸ್ ಮಾಡಿದ್ದು, ಬಂಗಾರವನ್ನು ಮೈ ಮೇಲೆ ಹಾಕಿಕೊಂಡು ಓಡಾಡಬಾರದು.

ಬಂಗಾರಕ್ಕಾಗಿ ಇಲ್ಲಿ ಕೊಲೆಯಾಗಿದೆ. ಬಿಚ್ಚಿ ಒಳಗೆ ಇಟ್ಟುಕೊಳ್ಳಿ ಎಂದು ಹೇಳಿ, ವಿಕಲಾಂಗ ಚೇತನರಾಗಿದ್ದ ಎಂ.ಬಿ. ರಾಘವೇಂದ್ರ (37) ಅವರ ಕೊರಳಲ್ಲಿದ್ದ 40 ಸಾವಿರ ರೂ. ಬೆಲೆ ಬಾಳುವ 10 ಗ್ರಾಂ ಬಂಗಾರದ ಚೈನ್ ಬಿಚ್ಚಿಸಿ, ನಕಲಿ ಡಿಸಿ ಸಾಹೇಬರ ಕೈಗೆ ಕೊಟ್ಟಿದ್ದಾರೆ. ಆ ವ್ಯಕ್ತಿ ಅದನ್ನು ಹಾಳೆಯಲ್ಲಿ ಸುತ್ತಿ ಚೈನ್ ವಾಪಾಸ್ ಕೊಟ್ಟಿದ್ದಾರೆ. ಸ್ವಲ್ಪ ಸಮಯದ ನಂತರ ರಾಘವೇಂದ್ರ ಕೈಯ್ಯಲ್ಲಿದ್ದ ಹಾಳೆಯನ್ನು ತೆರೆದು ನೋಡಿದಾಗ ಅದು ನನ್ನ ಚೈನ್ ಆಗಿರದೆ ನಕಲಿ ಬಂಗಾರದ ಸರವಾಗಿತ್ತು. ಈ ಬಗ್ಗೆ ರಾಘವೇಂದ್ರ ಅವರು ಹರಿಹರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಈ ಘಟನೆ ಜೂ.2ರ ಶುಕ್ರವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಹರಿಹರ ನಗರದ ಹೆಚ್. ಸಿ. ಬಡಾವಣೆ, 4ನೇ ಮೇನ್, ಅಂಬೇಡ್ಕರ್ ಕಾಲೇಜು ಬಳಿ ನಡೆದಿದೆ.

**3.85 ಲಕ್ಷ ರೂ. ಬೆಲೆಯ ಆಭರಣ ವಂಚನೆ:** ದಾವಣಗೆರೆ ಕೆ.ಟಿ.ಜೆ. ನಗರ ಠಾಣಾ ವ್ಯಾಪ್ತಿಯ ಗಣೇಶ್ ಲೇಔಟ್ 2ನೇ ಮೇನ್, 1ನೇ ಕ್ರಾಸ್‌ನಲ್ಲಿ ಇಂತಹದ್ದೇ ಪ್ರಕರಣ ಶುಕ್ರವಾರ ನಡೆದಿದ್ದು, ಭ್ರಮಾ ರಂಬ ಎಂಬ ಮಹಿಳೆ, ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿ ವಾಪಸ್ ಮನೆಗೆ ಹೋಗುತ್ತಿದ್ದಾಗ ನಡೆದಿದೆ.

20-25 ವರ್ಷ ವಯಸ್ಸಿನ ಯುವಕ ಬಂದು ನಾವು ಪೊಲೀಸರು, ಸಾಹೇಬರು

**ಪೊಲೀಸರೆಂದು ನಂಬಿಸಿ, ಒಂದೇ ದಿನ ಮೂರು ಕಡೆ ವಂಚನೆ**

ಕರೆಯುತ್ತಿದ್ದಾರೆ ಬನ್ನಿ ಎಂದು ಒಬ್ಬ ವ್ಯಕ್ತಿಯನ್ನು ತೋರಿಸಿದ್ದಾರೆ. ಆ ವ್ಯಕ್ತಿ ನಾವು ಪೊಲೀಸರು ನೀವು ಭಯಪಡಬೇಡಿ. ಬಂಗಾರದ ಆಭರಣಗಳನ್ನು ಧರಿಸಿಕೊಂಡು ಹೋಗುವುದು ಸರಿಯಲ್ಲ. ಅವುಗಳನ್ನು ಬಿಚ್ಚಿಕೊಡಿ, ನಾವು ಚೆಕ್ ಮಾಡಿ ವಾಪಸ್ ಕೊಡುತ್ತೇವೆ ಎಂದಿದ್ದಾರೆ.

ಆಗ ಮಹಿಳೆ ಒಪ್ಪದಿದ್ದಕ್ಕೆ ನೀವು ನಮ್ಮ ಕೈಗೆ ಕೊಡಬೇಡಿ. ನೀವು ಧರಿಸಿದ್ದ ಬಂಗಾದ ಆಭರಣ ಬಿಚ್ಚಿಕೊಟ್ಟರೆ ನಾವು ನಿಮ್ಮ ಸೆರಗಿನಲ್ಲಿ ಹಾಕುತ್ತೇವೆ ಅವುಗಳನ್ನು ಗಂಟುಕಟ್ಟಿಕೊಂಡು ಹೋಗಿ. ಇತ್ತೀಚೆಗೆ ದಾವಣಗೆರೆಯಲ್ಲಿ ರಾಬರಿ ಕೇಸುಗಳು ಜಾಸ್ತಿಯಾಗುತ್ತಿದ್ದು, ನಾವು ಚೆಕ್ ಮಾಡಬೇಕಾಗಿದೆ ಎಂದು ತಿಳಿಸಿದಾಗ ಧರಿಸಿದ್ದ 42 ಗ್ರಾಂ ತೂಕದ ಎರಡು ಎಳೆಯ ಮಾಂಗಲ್ಯ ಸರ, ಕೈಯಲ್ಲಿದ್ದ 35 ಗ್ರಾಂ ತೂಕದ ಎರಡು ಬಳೆಗಳನ್ನು ಬಿಚ್ಚಿ ಅವರ ಕೈಗೆ ಕೊಟ್ಟಾಗ ಅವರು ಸೀರೆ ಸೆರಗಿನಲ್ಲಿ ಹಾಕಿದ್ದಾರೆ., ಅವನ್ನು ಗಂಟು ಕಟ್ಟಿಕೊಂಡು ಮಹಿಳೆ ಮನೆಗೆ ಹೋಗಿದ್ದಾರೆ. ಮನೆಯಲ್ಲಿ ಮಗಳಿಗೆ ತೋರಿಸಲು ಹೋದಾಗ ನಕಲಿ ಸರ ಹಾಗೂ ಕಲ್ಲು ಇದ್ದುದು ಗೊತ್ತಾಗಿದೆ. ಒಟ್ಟು ಸುಮಾರು 77 ಗ್ರಾ.ಂ ತೂಕದ 3.85 ಲಕ್ಷ ರೂ. ಮೌಲ್ಯದ ಆಭರಣಗಳ ವಂಚನೆಗೊಳಗಾಗಿದ್ದಾರೆ. ಈ ಕುರಿತು ದೂರು ದಾಖಲಿಸಿದ್ದಾರೆ.

**ಶಿಕ್ಷಕಿಗೆ ವಂಚನೆ:** ದಾವಣಗೆರೆ ಸಿದ್ದವೀರಪ್ಪ ಬಡಾವಣೆ ಶಿಕ್ಷಕಿ ಚಂದ್ರಕಲಾ ಎಂಬುವವರು ಇದೇ ರೀತಿ ಗುರುವಾರ ವಂಚನೆಗೊಳಗಾಗಿದ್ದು, 35 ಗ್ರಾಂ.ನ 2 ಲಕ್ಷ ರೂ. ಬೆಲೆಯ ಮಾಂಗಲ್ಯದ ಸರ ಕಳೆದುಕೊಂಡಿದ್ದಾರೆ.

ಚಂದ್ರಕಲಾ ಅವರು ಗುರುವಾರ ಶಾಮನೂರು ರಸ್ತೆಯ ನಂದಿನಿ ಆಸ್ಪತ್ರೆ ಬಳಿ ಶಾಲೆಗೆ ಕರ್ತವ್ಯಕ್ಕೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದಾಗ ಖಾಕಿ ಪ್ಯಾಂಟ್, ಬಿಳಿ ಬಣ್ಣದ ತುಂಬು ತೋಳಿನ ಶರ್ಟ್ ಧರೆಸಿ, ನೀವು ಪ್ರತಿ ದಿನ ಕೊರಳಲ್ಲಿ ಮಾಂಗಲ್ಯದ ಚೈನು ಹಾಕಿಕೊಂಡು ಓಡಾಡುತ್ತಿದ್ದೀರಿ. ಪೊಲೀಸರು ಹೇಳಿದರೂ ಕೇಳುವುದಿಲ್ಲ. ಇಲ್ಲಿಯೇ ಸಮೀಪದಲ್ಲಿ ಯಾರೋ ಹೆಣ್ಣು ಮಗಳಿಗೆ ಚಾಕು ಹಾಕಿ ಚೈನ್ ಕಿತ್ತುಕೊಂಡು ಹೋಗಿದ್ದಾರೆ. ಆ ಮಹಿಳೆ ಆಸ್ಪತ್ರೆಯಲ್ಲಿ ನರಳುತ್ತಿದ್ದಾರೆ. ನೀವು ಮಾಂಗಲ್ಯ ಚೈನ್ ಹಾಕಿಕೊಂಡು ಓಡಬೇಡಿ. ಚೈನ್ ತೆಗೆದುಕೊಡಿ ಪ್ಯಾಕ್ ಮಾಡಿ ಕೊಡುತ್ತೇನೆಂದು ಹೇಳಿದ್ದಾರೆ.

ಅವರ ಮಾತು ನಂಬಿ ಮಹಿಳೆಯು ಚೈನ್ ಕೊಟ್ಟಾಗ ಆ ವ್ಯಕ್ತಿ ಪ್ಯಾಕ್ ಮಾಡುತ್ತಿರುವಾಗ ಅಲ್ಲಿಯೇ ಇದ್ದ ಮತ್ತೊಬ್ಬ ವ್ಯಕ್ತಿ ಮಹಿಳೆಯನ್ನು ಮಾತನಾಡಿಸುತ್ತಾ ಅವರ ಗಮನ ಬೇರೆಡೆ ಸೆಳೆದಿದ್ದಾರೆ. ಮೊದಲ ವ್ಯಕ್ತಿ ಚೈನ್ ಅನ್ನು ಪೇಪರ್‌ನಲ್ಲಿಟ್ಟು ಪ್ಯಾಕ್ ಮಾಡಿ ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟು ಹೊರಟು ಹೋಗಿದ್ದಾರೆ. ತುಸು ಹೊತ್ತಿನ ನಂತರ ಮಹಿಳೆ ಬ್ಯಾಗ್ ನಲ್ಲಿದ್ದ ಮಾಂಗಲ್ಯದ ಚೈನ್ ನೋಡಿದಾಗ ಅದು ನಕಲಿಯಾಗಿರುವುದು ಗೊತ್ತಾಗಿದೆ. ನನ್ನ ಗಮನ ಬೇರೆಡೆ ಸೆಳೆದು 35 ಗ್ರಾಂ.ನ 2 ಲಕ್ಷ ರೂ. ಬೆಲೆಯ ಮಾಂಗಲ್ಯದ ಚೈನ್ ವಂಚಿಸಿದ್ದಾರೆ ಎಂದು ಮಹಿಳೆಯು ವಿದ್ಯಾ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ಮಾತು ಉಳಿಸಿಕೊಳ್ಳಲಿ: ಡಿಕೆಶಿ ಸವಾಲು

(1ನೇ ಪುಟದಿಂದ) ಮಾಡಲಿ ಎಂದು ತಿಳಿಸಿದರು.

**ಸಂತಾಪ:** 230 ಕ್ಕೂ ಹೆಚ್ಚು ಮಂದಿಯನ್ನು ಬಲಿ ತೆಗೆದುಕೊಂಡಿರುವ ಒಡಿಸ್ಸಾ ರೈಲು ದುರಂತದ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಬಾಳ ಸೊರ್ ನಲ್ಲಿ ಸಂಭವಿಸಿರುವ ಅಪಘಾತದಲ್ಲಿ ಮೃತಪಟ್ಟವರ ಆತ್ಮಕ್ಕೆ ಚಿರಶಾಂತಿ ಕೋರಿದ್ದಾರೆ. ಅವರ ಕುಟುಂಬ ಸದಸ್ಯರಿಗೆ ತೀವ್ರ ಸಂತಾಪ ಸೂಚಿಸಿದ್ದಾರೆ. ದುರಂತದಲ್ಲಿ ಗಾಯಗೊಂಡವರು ಬೇಗ ಗುಣಮುಖರಾಗಲಿ ಎಂದು ಅವರು ಹಾರೈಸಿದ್ದಾರೆ.


**ಶಬರಿ ಗಿರಿ ರಿಯಲ್ ಎಸ್ಟೇಟ್, ದಾವಣಗೆರೆ**

ಬೆಂಗಳೂರಿನ ಬ್ರಿಗೇಡ್ ಟೆಕ್ ಪಾರ್ಕ್‌ನಲ್ಲಿ 9 ಲಕ್ಷ ಮತ್ತು 7 ಲಕ್ಷ ಬಾಡಿಗೆ ಬರುವ ಎರಡು ಬಿಲ್ಡಿಂಗ್ ಮಾರಾಟಕ್ಕಿವೆ. ಹಾಗೂ ಸಿಗ್ಮ ಟೆಕ್ ಪಾರ್ಕ್‌ನಲ್ಲಿ 9 ಲಕ್ಷ ಹಾಗೂ 3 ಲಕ್ಷ ಬಾಡಿಗೆ ಬರುವ ಬಿಲ್ಡಿಂಗ್ ಹಾಗೂ ಕಸ್ತೂರಬಾ ರೋಡ್‌ನಲ್ಲಿ 11 ಲಕ್ಷ ಬಾಡಿಗೆ ಬರುವ ಬಿಲ್ಡಿಂಗ್ ಹಾಗೂ ಇಂದಿರಾ ನಗರದಲ್ಲಿ 5 ಲಕ್ಷ ಮತ್ತು 6 ಲಕ್ಷ ಬಾಡಿಗೆ ಬರುವ ಎರಡು ಬಿಲ್ಡಿಂಗ್ ಹಾಗೂ ವಿಜಯ ಮಲ್ಯ ರೋಡಿನಲ್ಲಿ 5 ಲಕ್ಷ ಬಾಡಿಗೆ ಬರುವ ಬಿಲ್ಡಿಂಗ್ ಹಾಗೂ ಜೆಪಿ ನಗರದಲ್ಲಿ 3 ಲಕ್ಷ ಬಾಡಿಗೆ ಬರುವ ಬಿಲ್ಡಿಂಗ್ ಮಾರಾಕ್ಕಿವೆ.

ಆಸಕ್ತರು ಸಂಪರ್ಕಿಸಿ. 89714 99575



**ಕೆಲಸಕ್ಕೆ ಬೇಕಾಗಿದ್ದಾರೆ**

**B.Com., M.Com., MBA**

ಪದವೀಧರರು ದಾವಣಗೆರೆಯಲ್ಲಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ.

ಆಕರ್ಷಕ ಸಂಬಳ ಇರುತ್ತದೆ.

ಸಂಪರ್ಕಿಸಿ

ಮೊ : 96865 51303


## ಉಚಿತ ಬಸ್ ಪ್ರಯಾಣ : ಖಾಸಗಿ ಬಸ್ ವಲಯಕ್ಕೆ ತಳಮಳ ಶುರು

ಬೆಂಗಳೂರು, ಜೂ. 3 – ರಾಜ್ಯ ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಸಂಚಾರದ ಸೌಲಭ್ಯ ಕಲ್ಪಿಸುವುದಾಗಿ ಘೋಷಿಸಿರುವುದು ಖಾಸಗಿ ಬಸ್ ಮಾಲೀಕರಿಗೆ ಆತಂಕ ತಂದಿದೆ.

ಸರ್ಕಾರದ ನಿರ್ಧಾರದಿಂದ ಖಾಸಗಿ ಬಸ್ಸುಗಳ ಮಾಲೀಕರಿಗೆ ಒಟ್ಟಾರೆಯಾಗಿ ವರ್ಷಕ್ಕೆ 1,300 ಕೋಟಿ ರೂ. ನಷ್ಟವಾಗುತ್ತದೆ ಎಂದು ಹೇಳಲಾಗು ತ್ತಿದೆ. ಆ ಹಿನ್ನೆಲೆಯಲ್ಲಿ, ಖಾಸಗಿ ಬಸ್‌ಗಳಲ್ಲಿ ಪ್ರಯಾಣ ಮಾಡುವ ಮಹಿಳೆಯರಿಗೂ ಉಚಿತ ಪ್ರಯಾ ಣದ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿ ಕೊಳ್ಳಲು ನಿರ್ಧರಿಸಲಾಗಿದೆ.

ಬೆಂಗಳೂರಿನಲ್ಲಿ ಶುಕ್ರವಾರ ಸಭೆ ಸೇರಿದ ಖಾಸಗಿ ಬಸ್ ಮಾಲೀಕರ ಸಂಘದ ಪದಾಧಿಕಾರಿ ಗಳು ಸರ್ಕಾರವು ಮಹಿಳೆಯರಿಗೆ ಉಚಿತ ಪ್ರಯಾಣದ ಸೇವೆಯನ್ನು ಜಾರಿಗೊಳಿಸಿದರೆ ತಮ್ಮ ವ್ಯವಹಾರಗಳ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿದರು.

ಸ್ಟೇಜ್ ಕ್ಯಾರೇಜ್ ಬಸ್ ಮಾಲೀಕರ ಸಂಘದ ಕಾರ್ಯದರ್ಶಿ ಕೆ. ಗೋವಿಂದರಾಜ್ ಮಾತನಾಡಿ, ರಾಜ್ಯದಲ್ಲಿ ಸ್ಟೇಜ್ ಕ್ಯಾರಿಯರ್ ಬಸ್ ಪರ್ಮಿಟ್ ಅಡಿಯಲ್ಲಿ ಸುಮಾರು 3,500 ಖಾಸಗಿ ಬಸ್ಸುಗಳು ಸಾರಿಗೆ ಸೇವೆ ನೀಡುತ್ತಿವೆ. ಅವುಗಳಲ್ಲಿ ಶೇ. 45ರಷ್ಟು ಮಹಿಳೆಯರೇ ಪ್ರಯಾಣ ಬೆಳೆಸುತ್ತಾರೆ ಎಂದು ಹೇಳಿದರು.

ಮಹಿಳಾ ಪ್ರಯಾಣಿಕರು ಸರ್ಕಾರಿ ಬಸ್ಸುಗಳತ್ತ ಮುಖ ಮಾಡಿದಾಗ ಅವರ ಜೊತೆಯಲ್ಲಿ ಪ್ರಯಾಣಿಸುವ ಪುರುಷ ಪ್ರಯಾಣಿಕರೂ ಸರ್ಕಾರಿ ಬಸ್ಸುಗಳಿಗೇ ಹೋಗುತ್ತಾರೆ. ಹೀಗಾಗಿ ಖಾಸಗಿ ಬಸ್‌ಗಳಿಗೆ ಬರುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ ಎಂಬ ಕಳವಳ ಇದೆ.

ಪ್ರತಿ ಬಸ್ಸಿಗೆ ಮೂರು ತಿಂಗಳಿಗೊಮ್ಮೆ 50 ಸಾವಿರ ರೂ.ಗಳನ್ನು ರೋಡ್ ಟ್ಯಾಕ್ಸ್ ರೂಪದಲ್ಲಿ ಸರ್ಕಾರಕ್ಕೆ ಕಟ್ಟುತ್ತಿದ್ದೇವೆ. ಖಾಸಗಿ



ಬಸ್ ವಲಯದಲ್ಲಿ ಸುಮಾರು 3 ಲಕ್ಷ ಮಂದಿ ದುಡಿಯುತ್ತಿದ್ದಾರೆ. ಸರ್ಕಾರದ ನಿರ್ಧಾರ ಅವರಿಗೂ ಸಮಸ್ಯೆ ತರಲಿದೆ ಎಂದು ಖಾಸಗಿ ಬಸ್ ಮಾಲೀಕರು ಹೇಳುತ್ತಿದ್ದಾರೆ. ಈಗಾಗಲೇ ಹಲವಾರು ಬಸ್ ಮಾಲೀಕರು ರೋಡ್ ಟ್ಯಾಕ್ಸ್ ಕಟ್ಟಲು, ಇನ್ಶೂರೆನ್ಸ್ ಕಟ್ಟಲು ಆಗುತ್ತಿಲ್ಲ. ಕಂಡಕ್ಟರ್, ಡ್ರೈವರ್‌ಗಳಿಗೆ ಸಂಬಳ ಕೊಡಲು ಆಗುತ್ತಿಲ್ಲ. ಈಗ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸಿದರೆ ದೊಡ್ಡ ಹೊಡೆತ ಬೀಳಲಿದೆ ಎಂಬ ಕಳವಳ ವ್ಯಕ್ತವಾಗುತ್ತಿದೆ.

## ಅದ್ಧೂರಿ ಸ್ವಾಗತ

(1ನೇ ಪುಟದಿಂದ) ಬಸವರಾಜ್ ಶಿವಗಂಗಾ, ಹರಪನಹಳ್ಳಿ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ, ಹರಿಹರ ಮಾಜಿ ಶಾಸಕ ಎಸ್. ರಾಮಪ್ಪ, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ., ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಬಿ ಇಟ್ನಾಳ, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ, ತಹಶೀಲ್ದಾರ್ ಅಶ್ವತ್ಥ್ ಸೇರಿದಂತೆ, ಅಧಿಕಾರಿಗಳು ಈ ಸಂದರ್ಭದಲ್ಲಿದ್ದರು.

ಮಲ್ಲಿಕಾರ್ಜುನ್ ಅವರ ಮೆರವಣಿಗೆಗೆ ಕುದುರೆಯ ಸಾರೋಟು ತರಿಸಲಾಗಿತ್ತಾದರೂ, ಅವರು ತೆರೆದ ವಾಹನದಲ್ಲಿ ಸಾಗಿದರು. ಈ ಸಂದರ್ಭದಲ್ಲಿ ದಾರಿಯುದ್ದಕ್ಕೂ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳು ಹಾರ ಹಾಕಿ ಸ್ವಾಗತಿಸಿದರು. ಕಾರ್ಯಕರ್ತರು ಕಾಂಗ್ರೆಸ್ ಧ್ವಜದೊಂದಿಗೆ ಮೆರವಣಿಗೆಯಲ್ಲಿ ಸಾಗಿದರು.

ಜಿಲ್ಲಾ ಪಂಚಾಯ್ತಿ ಕಚೇರಿ ಮುಂಭಾಗದಿಂದ ಆರಂಭವಾದ ಮೆರವಣಿಗೆ ಹಳೇ ಭಾಗದಲ್ಲೂ ಸಂಚರಿಸಬೇಕಾಗಿತ್ತು. ಆದರೆ ಸಮಯದ ಅಭಾವದಿಂದ ಜಯದೇವ ವೃತ್ತದಲ್ಲಿ ಮೊಟಕುಗೊಳಿಸಿ, ನಂತರ ಕಲ್ಲೇಶ್ವರ ಮಿಲ್ ಆವರಣಕ್ಕೆ ತೆರಳಲಾಯಿತು. ಜಯದೇವ ವೃತ್ತದಲ್ಲಿ ಸಚಿವರು ಜನತೆಯನ್ನುದ್ದೇಶಿಸಿ ಮಾತನಾಡಿದರು.

ಡಾ.ಹೆಚ್.ವಿ. ಅರವಿಂದ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಮುಖಂಡರುಗಳಾದ ಮಾಲತೇಶ್ ಜಾಧವ್, ಮುದೇಗೌಡ್ರ ಗಿರೀಶ್, ಗಡಿಗುಡಾಳ್ ಮಂಜುಮಾಥ್, ಬೇತೂರು ಕರಿಬಸಪ್ಪ, ದಿನೇಶ್ ಕೆ.ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಜಿ.ಸಿ. ನಿಂಗಪ್ಪ, ಮಾಗಾನಳ್ಳಿ ಪರಶುರಾಮ್, ಹದಡಿ ಹಾಲಪ್ಪ, ಅಯೂಬ್ ಪೈಲ್ವಾನ್, ಕೆ.ಜಿ. ಶಿವಕುಮಾರ್, ಆರನೇಕಲ್ಲು ಮಂಜುನಾಥ್ ಸೇರಿದಂತೆ ಪಾಲಿಕೆ ಸದಸ್ಯರು, ಕಾರ್ಯಕರ್ತರು ಇದ್ದರು.

ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ ಶಾಮನೂರು ಅವರು ಮೆರವಣಿಗೆಯಲ್ಲಿ ಭಾಗವಹಿಸುವ ಮೂಲಕ ಯುವಕರ ಆಕರ್ಷಣೆಯ ಕೇಂದ್ರ ಆಗಿದ್ದರು. ಸಮರ್ಥ ಅವರನ್ನು ಯುವ ಸಮುದಾಯ ಸೆಲ್ಫಿಗೆ ಮುಗಿಬಿದ್ದರಲ್ಲದೇ ಜೈ ಜೈ ಮಲ್ಲಣ್ಣ ಸಾಂಗ್ ಗೆ ಹೆಜ್ಜೆ ಹಾಕಿಸಿದರು.ಕೊನೆಗೆ ಪೊಲೀಸರು ಆಗಮಿಸಿ ಮೆರವಣಿಗೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟರು.

## ನಗರದ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಇಂದು ಹುಣ್ಣಿಮೆ ಪೂಜೆ

ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ಕುಂದುವಾಡ ರಸ್ತೆಯಲ್ಲಿರುವ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ವಿಶೇಷ ಪೂಜೆ, ಅಲಂಕಾರ ನಡೆಯುವುದು. ಇಂದು ಮಧ್ಯಾಹ್ನ 12 ಗಂಟೆಯಿಂದ ಉದ್ಯಮಿ ಎಚ್. ರಮೇಶ್ ಮತ್ತು ಕುಟುಂಬದವರಿಂದ ಅನ್ನ ಸಂತರ್ಪಣೆ ಏರ್ಪಡಿಸಿದೆ.


**ಉಚಿತ ಚಿಕಿತ್ಸಾ ಶಿಬಿರ**

ಸುಸಂಸ್ಕೃತ ಭಾರತದ ಭವ್ಯ ಚರಿತ್ರೆಯ ಹಾಗೂ ಸನಾತನ ಧರ್ಮದ ವೈದ್ಯಕೀಯ ಶಾಸ್ತ್ರ ಎಂದೇ ಚಿರಪರಿಚಿತವಾದದ್ದು ಆಯುರ್ವೇದ. ಈ ಚಿಕಿತ್ಸಾ ಶಾಸ್ತ್ರದಲ್ಲಿ ರೋಗಗಳಿಗೆ ನೀಡಿರುವಂತಹ ನಾನಾ ರೀತಿಯ ಔಷಧಿಗಳ ಉಲ್ಲೇಖನೆ, ಈ ಆಧುನಿಕ ಲೋಕಕ್ಕೆ ಸವಾಲು ಒಡ್ಡಿದೆ. ಅಂತಹ ಚಿಕಿತ್ಸೆಯು ಜನ ಸಾಮಾನ್ಯರಿಗೆ ತಲುಪುವ ದೃಷ್ಟಿಯಿಂದ ದಾವಣಗೆರೆಯಲ್ಲಿ ವೈದ್ಯರ ಮತ್ತು ಔಷಧಿಗೆ ಶುಲ್ಕವಿಲ್ಲದೇ ಉಚಿತವಾಗಿ ನೀಡಲಾಗುವುದು.

ಶಿಬಿರ ದಿನಾಂಕ : ದಿನಾಂಕ 05-06-2023 ರಿಂದ 12-06-2023ರವರೆಗೆ.
ಸಮಯ : ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಮತ್ತು ಸಂಜೆ 6 ರಿಂದ 8.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

**ಅನ್ವಯ ಆಯುರ್ವೇದ ಆಸ್ಪತ್ರೆ**

ವಿಳಾಸ : #1981, 10ನೇ ಕ್ರಾಸ್, ಎಂ.ಸಿ.ಸಿ. 'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.
ಫೋ. 08192-252228, ಮೊ. 8618642929

ವಿ.ಸೂ. : ಪ್ರತಿದಿನ ಶಿಬಿರಕ್ಕೆ ಹೆಸರು ಮೊದಲೇ ನೊಂದಾಯಿಸಿಕೊಳ್ಳಬೇಕು. ಹೆಸರು ನೊಂದಾಯಿಸಿದ ಒಬ್ಬರಿಗೆ (ದಿನಕ್ಕೆ ಒಂದು) ಉಚಿತ ಚಿಕಿತ್ಸೆ ನೀಡಲಾಗುವುದು.



**WANTED**

| JOB | NO |
|---|---|
| PRODUCTION INCHARGE | 01 |
| STOCK & DESPATCH INCHARGE | 01 |
| PRINTING OPERATOR & HELPER | 04 |
| DRIVER FOR OWNER CAR | 01 |

REQUIRE COMPUTER KNOWLEDGE
EXPERIENCE CANDIDATES FIRST PREFERENCE

Visit With Your Resume
CONTACT 9845379555
ಕೂಡಲೇ ಸಂಪರ್ಕಿಸಿ

**JAIN POLY PACKS**
Plot No : 15, KIADB, Karur Industrial Area, Textile Park
NEAR DC OFFICE, DAVANAGERE-577005. KARNATAKA
E-mail : jainpolypacks555@gmail.com


## ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿಂದು





ಬಾಡಾ ಕ್ರಾಸ್‌ನಲ್ಲಿ ರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಕಾರ ಹುಣ್ಣಿಮೆ ಪ್ರಯುಕ್ತ 266 ನೇ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯ ಕ್ರಮವನ್ನು ಇಂದು ಮಧ್ಯಾಹ್ನ 12 ಕ್ಕೆ ಏರ್ಪಡಿ ಸಲಾಗಿದೆ. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ವೀರೇಶ್ವರ ಪುಣ್ಯಾಶ್ರಮದ ಶ್ರೀ ಡಾ. ಕಲ್ಲಯ್ಯಜ್ಜನವರು ಸಾನ್ನಿಧ್ಯ ವಹಿಸಲಿದ್ದಾರೆ. ಶಾಮನೂರು ಶಿವಶಂಕರಪ್ಪ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಅಥಣಿ ಎಸ್. ವೀರಣ್ಣ, ಎ.ಹೆಚ್. ಶಿವಯೋಗಿ ಸ್ವಾಮಿ ಉಪಸ್ಥಿತರಿರುವರು. ಅಂದಿನ ಪ್ರಸಾದ ಸೇವೆಯನ್ನು ಡಾ. ಟಿ.ಜಿ. ನಿರಂಜನ್ ಹಾಗೂ ಕುಟುಂಬ, ಪಾಲ ರಾಜಗುಪ್ತ, ಲಿಂ. ಶ್ರೀಮತಿ ಪಿ.ಆರ್. ಶಾರದ ಮತ್ತು ಸಹೋದರರು ಹಾಗೂ ಮಕ್ಕಳು ವಹಿಸಿಕೊಳ್ಳಲಿದ್ದಾರೆ.


**ಬೇಕಾಗಿದ್ದಾರೆ**

PIAGGIO ape

ಅಪೆ ಆಟೋ Diesel, LPG, CNG ಪ್ಯಾಸೆಂಜರ್, ಗೂಡ್ಸ್ ಅಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು

ಸೇಲ್ಸ್ ಎಕ್ಸಿಕ್ಯೂಟಿವ್ಸ್-6 (ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)
ಸೇಲ್ಸ್ ಮ್ಯಾನೇಜರ್-1

ವಿದ್ಯಾರ್ಹತೆ: SSLC to Degree. ಆಕರ್ಷಕ ಸಂಬಳ + Incentive+TA, DA

ವರ್ಕ್‌ಶಾಪ್ ಸೂಪರ್‌ವೈಸರ್-2 ಹೊಸಬರಿಗೂ ಕೂಡ ಆದ್ಯತೆ ಇದೆ

ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:

**ಗಣೇಶ ಮೋಟಾರ್** ಶೆಲ್ ಪೆಟ್ರೋಲ್ ಬಂಕ್ ಎದುರು, ಶೃತಿ ಮೋಟಾರ್ಸ್ ಪಕ್ಕ, ಪಿ.ಬಿ. ರಸ್ತೆ ದಾವಣಗೆರೆ-6. Mob: 84949 43963



**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
**Numero Astrologer & Palmistry**



ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 5 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: ಪಂ. ಜಿ.ವಿ. ಭಟ್ಟರ್
ಆಹಾರ್ ಹೋಟೆಲ್, ಗಾಂಧಿ ಸರ್ಕಲ್, ದಾವಣಗೆರೆ.
ಮೊಬೈಲ್ : 94481 78626, 89716 99826



**ಸಿದ್ದವ್ವನಹಳ್ಳಿ ಓಬನಾಯಕ ಚಾರಿಟಬಲ್ ಟ್ರಸ್ಟ್ (ರಿ.) ಬುಳ್ಳಾಪುರ**

ಕನ್ನಡ ಮಾಧ್ಯಮ ವಸತಿ ಪ್ರೌಢಶಾಲೆ, ಹೊಸ ಬುಳ್ಳಾಪುರ, ಆನಗೋಡು (ಅ), ದಾವಣಗೆರೆ (ತಾ) (ಜಿ) 577 556

**ಶಿಕ್ಷಕರು ಬೇಕಾಗಿದ್ದಾರೆ**

| Subjects | Posts | Qualification |
|---|---|---|
| ಕನ್ನಡ | 01 | B.A., B.Ed., |
| ಇಂಗ್ಲೀಷ್ | 01 | B.A., B.Ed., |
| ಹಿಂದಿ | 01 | B.A., B.Ed., (Hindi) |
| ಗಣಿತ | 01 | B.Sc., B.Ed., |
| ವಿಜ್ಞಾನ | 01 | B.Sc., B.Ed., |
| ಸಮಾಜ ವಿಜ್ಞಾನ | 01 | B.A., B.Ed., |

ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವ-ವಿವರ, ಭಾವಚಿತ್ರ ಮತ್ತು ದಾಖಲೆಗಳೊಂದಿಗೆ ಈ ಕೆಳಕಂಡ ವಿಳಾಸವನ್ನು ಸಂಪರ್ಕಿಸಬಹುದು.

ಸಂದರ್ಶನಕ್ಕಾಗಿ ಈ ಕೆಳಕಂಡ ವಿಳಾಸ ಹಾಗೂ ದೂರವಾಣಿಯನ್ನು ಸಂಪರ್ಕಿಸಬಹುದು.

ವಿಳಾಸ : ಮುಖ್ಯೋಪಾಧ್ಯಾಯರು, S.O.C.T. ಕನ್ನಡ ಮಾಧ್ಯಮ ವಸತಿ ಪ್ರೌಢಶಾಲೆ, ಹೊಸಬುಳ್ಳಾಪುರ, ಆನಗೋಡು (ಪೋ) ದಾವಣಗೆರೆ (ತಾ.) (ಜಿ.) - 577 556. ಮೊ : 89711 84427, 99009 80190



**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜಿ.ಪಿ., ಇಂಜಿನಿಯರ್
+91 70190 70400

#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.



**MAHARAJ SOAP INDUSTRY PVT LTD.**

Industrial Area, Lokikere Road, Davanagere

***WANTED ACCOUNTANT (02 Post)***

*Qualification :*

- M.Com - Tally with 2 to 3 years Experience.
- Ability to maintain accounts Independently
- Good Communication knoweldge in English.

*Apply your resume to* msipl.hr@live.com

Call 99455 26169


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ॥ ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ. 1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ನಾಗಮ್ಮ, ನಿಂಗರಾಜು, ಬಸವರಾಜು.ಆರ್ ಲಲಿತಮ್ಮ, ಹನುಮಂತಪ್ಪ, ನಾರಾಯಣಸ್ವಾಮಿ. ಎಂ.ಜಿ.ಎಸ್** ಇವರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 177/23 ಅನ್ನು ಸಲ್ಲಿಸಿದ್ದು, ಈ ದಾವೆಯಲ್ಲಿ ಮಾನ್ಯ ನ್ಯಾಯಲಯವು ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ಪರಭಾರೆ ಅಡಮಾನ ವಗ್ಯೆರೆ ಮಾಡದಂತೆ ಏಕಪಕ್ಷಿಯ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಾಡಿರುತ್ತದೆ. ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ನಾಗಮ್ಮ ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಬಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾದ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂದಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂದಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

**ಷೆಡ್ಯೂಲ್ ಬಿ**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 256/1 ಖಾತೆ ನಂ.4, ಒಟ್ಟು ವಿಸ್ತೀರ್ಣ ಎಕರೆ 3, ಗುಂಟೆ 02 ವುಳ್ಳ ಜಮೀನು ಪೈಕಿ ಪೂರ್ವ ಭಾಗದ ವಿಸ್ತೀರ್ಣ ಎಕರೆ ಎರಡು ಗುಂಟೆ ಇಲ್ಲ (2-00) ಅಕಾರ ರೂ. 4-00 ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಹೆಂಚಿನಮನೆ ರುದ್ರಪ್ಪನವರ ಜಮೀನು, **ಪಶ್ಚಿಮ** : ಇದೇ ಸರ್ವೆ ನಂಬರು ಪೈಕಿ ಉಳಿದ ಜಮೀನು, **ಉತ್ತರಕ್ಕೆ:** ಶ್ರೀ ನಾಗಮ್ಮ ಮತ್ತು ಭೀಮಪ್ಪ ಇವರುಗಳ ಜಮೀನು, **ದಕ್ಷಿಣಕ್ಕೆ** : ವಾಮದೇವಪ್ಪನವರ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ॥ ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ.1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ಲಕ್ಕಮ್ಮ, ಪರಶುರಾಮ್, ನಾಗರಾಜ, ಮಂಜುನಾಥ್, ಇಂದ್ರಮ್ಮ, ಪ್ರದೀಪ್, ಮಧುಕುಮಾರ್,** ಇವರು ನೊಂದಾಯಿತ ಕ್ರಯದ ಕರಾರು ದಿನಾಂಕ 06.08.2015 ರಂದು ಬರೆದುಕೊಟ್ಟಿದ್ದು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂದಿಸಿದಂತೆ ನಮ್ಮ ಕಕ್ಷಿದಾರರು ಲಕ್ಕಮ್ಮ ಮತ್ತು ಇತರರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 175/2023 ಅನ್ನು ಸಲ್ಲಿಸಿದ್ದು, ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ಲಕ್ಕಮ್ಮ ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಭಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾದ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂದಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂದಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 257/1, ಖಾತೆ ನಂ.3, ಒಟ್ಟು ವಿಸ್ತೀರ್ಣ ಎಕರೆ 1, ಗುಂಟೆ 36 ವುಳ್ಳ ಜಮೀನಿನ ಅಕಾರ ರೂ. 1-90 ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಎನ್ ಹೆಚ್ 4 ಬೈಪಾಸ್ ರಸ್ತೆ, **ಪಶ್ಚಿಮ** : ನಾಗಮ್ಮ ಮತ್ತು ಇತರೆಯವರಿಂದ ನಿಮಗೆ ಅಗ್ರಿಮೆಂಟ್ ಆಗಿರುವ ಸ, ನಂ 257/3, **ಉತ್ತರಕ್ಕೆ:** ಮಲ್ಲಪ್ಪ ಮೇಷ್ಟ್ರು ಜಮೀನು, **ದಕ್ಷಿಣಕ್ಕೆ** : ಶ್ರೀಮತಿ ನಾಗಮ್ಮ ಸುಂದರಪ್ಪ ಇವರುಗಳ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

ನನ್ನ ಕಕ್ಷಿದಾರರಾದ **ಶ್ರೀ ಉದಯ್ ಶಿವಕುಮಾರ್ ದಿ॥ ರಾಜಣ್ಣ** 52 ವರ್ಷ, ವಾಸ ಬನಶಂಕರಿ ಬಡಾವಣೆ, ಮನೆ ನಂ.1924/196 ಎನ್.ಹೆಚ್. 4, ಹತ್ತಿರ ದಾವಣಗೆರೆ ಜಿಲ್ಲೆ ನಿವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ,

ಈ ಕೆಳಕಂಡ ಷೆಡೂಲ್ ಸ್ವತ್ತಿನ ಕುರಿತು ಪ್ರತಿವಾದಿಗಳಾದ **ನಾಗಮ್ಮ, ಮಹೇಶ್ ಕೆ. ಬಿ, ಜಯಮ್ಮ, ಪ್ರಸನ್ನಕುಮಾರ್, ಮಂಜಮ್ಮ ಎ ಡಿ, ರೇಣುಕಮ್ಮ, ಮಹಾಂತೇಶ್ ಕೆ ಟಿ, ಹಾಲಪ್ಪ ಮಂಜಪ್ಪ ಕೆ, ಪ್ರವೀಣ್‌ಕುಮಾರ್, ಗಿರೀಶ್, ರಮೇಶ್ ಕೃಷ್ಣಮೂರ್ತಿ, ಎಚ್. ನಾಗರಾಜ್, ಅವಿನಾಶ್, ಜ್ಯೋತಿ, ಅಂಜಲಿ, ಕಾರ್ತಿಕ್,** ಇವರುಗಳು ನೊಂದಾಯಿತ ಕ್ರಯದ ಕರಾರು ದಿನಾಂಕ 04.08.2015 ರಂದು ಬರೆದುಕೊಟ್ಟಿದ್ದು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿಗೆ ಸಂಬಂದಿಸಿದಂತೆ ನಮ್ಮ ಕಕ್ಷಿದಾರರು ಲಕ್ಕಮ್ಮ ಮತ್ತು ಇತರರುಗಳ ವಿರುದ್ದ ದಾವಣಗೆರೆಯ ಒಂದನೇ ಹಿರಿಯ ಸಿವಿಲ್ ನ್ಯಾಯಲಯದಲ್ಲಿ ಅಸಲು ದಾವೆ ನಂ. 176/2023 ಅನ್ನು ಸಲ್ಲಿಸಿದ್ದು, ತದನಂತರ ಮೇಲ್ಕಾಣಿಸಿದ ಪ್ರತಿವಾದಿಗಳಾದ ಲಕ್ಕಮ್ಮ, ಮತ್ತು ಇತರರು ತರಾತುರಿಯಲ್ಲಿ ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡಿ ಸದರಿ ಷೆಡ್ಯೂಲ್ ಸ್ವತ್ತುಗಳನ್ನು ಮಾರಾಟ ಮಾಡಲು ಅಥವಾ ಯಾವುದೇ ರೀತಿಯ ಪರಭಾರೆ ಮಾಡಲು ಹೊರಟಿರುತ್ತಾರೆ ಇವರುಗಳಿಗೆ ಈ ಷೆಡೂಲ್ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾದ್ಯತೆಗಳು ಇರುವುದಿಲ್ಲ ಅದ್ದರಿಂದ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತುಗಳೊಂದಿಗೆ ಯಾವುದೇ ರೀತಿಯ ಕ್ರಯಪತ್ರವನ್ನಾಗಲೀ, ಪರಭಾರೆ ಪತ್ರವನ್ನಾಗಲೀ ಮಾಡಿಕೋಳ್ಳದಂತೆ ಮನವಿ ಮಾಡಿಕೋಳ್ಳುತ್ತನೆ ಒಂದು ವೇಳೆ ಸಾರ್ವಜನಿಕರು ಸದರಿ ಷೆಡೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವ್ಯವಹರಿಸಿದ್ದೇ ಆದಲ್ಲಿ ಅದರಿಂದ ಉಂಟಾಗುವ ಕಷ್ಟನಷ್ಟಗಳಿಗೆ ಹಾಗೂ ಅವರೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಯಿರಿ ಇದಕ್ಕೆ ಸಂಬಂಧಿಸಿದ ಷೆಡ್ಯೂಲ್ ಸ್ವತ್ತುಗಳು ಈ ಕೆಳಗಿನಂತೆ ಹೇಳಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಚೇರಿ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ತಾಲೂಕು, ಕುಬಸ ಹೋಬಳಿ, ಕುಂದುವಾಡ ಗ್ರಾಮದ ರಿ ಸರ್ವೆ ನಂ. 257/3, ಒಟ್ಟು ವಿಸ್ತೀರ್ಣ ಎಕರೆ 2, ಗುಂಟೆ 63 ವುಳ್ಳದ್ದರ ಪೈಕಿ ಪೂರ್ವ ಭಾಗದ ಕಡೆಗೆ ಬರತಕ್ಕ ವಿಸ್ತೀರ್ಣ ಎಕರೆ – ಎರಡು, ತುಂಟೆ – ಇಲ್ಲ (2-00) ವುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ : **ಪೂರ್ವಕ್ಕೆ** : ಶ್ರೀಮತಿ ಲಕ್ಕಮ್ಮ, ಇಂದ್ರಮ್ಮ ಇವರುಗಳ ಜಮೀನು, **ಪಶ್ಚಿಮ** : ಇದೇ ಸರ್ವೆ ನಂ ಪೈಕಿ ಉಳಿದ 0-31 ಗಂಟೆ ಜಮೀನು, **ಉತ್ತರಕ್ಕೆ:** ಮಲ್ಲಪ್ಪ ಮೇಷ್ಟ್ರು ಇವರ ಸಹೋದರರ ಜಮೀನು, **ದಕ್ಷಿಣಕ್ಕೆ** : ಶ್ರೀಮತಿ ನಾಗಮ್ಮ, ಲಲಿತಮ್ಮ ಇವರುಗಳ ಜಮೀನು. ಈ ಮಧ್ಯದ ಜಮೀನು ಈ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

**ಎಸ್. ಎಸ್. ಸಲೀಂ, ಕಕ್ಷಿದಾರರ ಪರ ವಕೀಲರು , 1785 /3, 2ನೇ ಮೆನ್ , 2ನೇ ಕ್ರಾಸ್, ವಿನೋಬನಗರ, ದಾವಣಗೆರೆ , ಮೊ : ನಂ. 9448178598**

# ಅಧಿಕಾರ ಇಂದು ಇರುತ್ತೆ, ಹೋಗುತ್ತೆ, ಆದರೆ ವಿಶ್ವಾಸ ಮುಖ್ಯ: ಎಸ್ಸೆಸ್ಸೆಂ



ದಾವಣಗೆರೆ, ಜೂ. 3- ಅಧಿಕಾರ ಇಂದು ಇರುತ್ತೆ, ಹೋಗುತ್ತೆ. ಆದರೆ ವಿಶ್ವಾಸ ಮುಖ್ಯ. ನೀವು ನಮ್ಮ ಮೇಲೆ ಇಟ್ಟಿರುವ ಈ ವಿಶ್ವಾಸ ಮುಂದೆಯೂ ಇರಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ, ಗಣಿ, ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರೂ ಆದ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ನಗರದ ಜಯದೇವ ವೃತ್ತದಲ್ಲಿ ಮಾತನಾಡಿದ ಅವರು, ಮಂತ್ರಿಯಾಗಿ ನಗರಕ್ಕೆ ಮೊದಲ ಬಾರಿಗೆ ಬಂದ ನನಗೆ ವಿವಿಧ ಭಾಗಗಳಿಂದ ಬಂದು ಆಶೀರ್ವದಿಸಿದ್ದೀರಿ. ಶುಭಾಶಯ ಕೋರಿದ್ದೀರಿ. ನಿಮ್ಮೆಲ್ಲರಿಗೂ ತುಂಬು ಹೃದಯದಿಂದ ಅಭಿನಂದಿಸುತ್ತೇನೆ ಎಂದರು.

ದಾವಣಗೆರೆ, ಉತ್ತರ, ದಕ್ಷಿಣ ಸೇರಿದಂತೆ ಜಿಲ್ಲೆಯಲ್ಲಿ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ನಿಮ್ಮೆಲ್ಲರ ಉತ್ಸಾಹ, ಕಾರ್ಯಕರ್ತರ ಶ್ರಮ ಕಾರಣ ಎಂದು ಶ್ಲಾಘಿಸಿದರು.

ಮುಖ್ಯಮಂತ್ರಿಗಳು ಚುನಾವಣಾ ಪೂರ್ವದಲ್ಲಿ ಹೇಳಿದ್ದ ಐದೂ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದಾರೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಕಾಂಗ್ರೆಸ್ ಎಂದಿಗೂ ಬಡವರ ಪಕ್ಷ ಎಂದರು.

ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ ಬಿಜೆಪಿ ಯಾವ ರೀತಿ ದುರಾಡಳಿತ ನಡೆಸಿದೆ ಎಂಬುದನ್ನು ಎಲ್ಲರೂ ನೋಡಿದ್ದೇವೆ. ಪಾಲಿಕೆ, ದೂಡಾ ಸೇರಿದಂತೆ ಹಲವೆಡೆ ಕಾಂಗ್ರೆಸ್ ಮೆಜಾರಿಟಿ ಇದ್ದರೂ ದುರಾಡಳಿತದಿಂದ ಬಿಜೆಪಿ ಅಧಿಕಾರ ನಡೆಸಿದೆ. ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡಿದೆ. ಇನ್ನು ಮುಂದೆ ನಾವು ಜಿಲ್ಲೆಯನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕಿದೆ ಎಂದರು.

ಮುಂದಿನ ದಿನಗಳಲ್ಲಿ ಲೋಕಸಭಾ ಚುನಾವಣೆ ಬರಲಿದೆ. ಅದಕ್ಕಾಗಿಯೂ ಹೋರಾಟ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ದಾವಣಗೆರೆ ಜಿಲ್ಲೆ ಎಂದರೆ ಕಾಂಗ್ರೆಸ್ ಜಿಲ್ಲೆ ಎನ್ನುವಂತೆ ಹೋರಾಟ ನಡೆಸೋಣ. ನಗರ ಹಾಗೂ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ಶ್ರಮಿಸೋಣ ಎಂದರು.

## ಎ.ಬಿ.ಪಿ.ಎಸ್. ಮೂಲಕ ಖಾತ್ರಿಯ ಶೇ.88ರಷ್ಟು ಕೂಲಿ

ನವದೆಹಲಿ, ಜೂ. 3 – ಕಳೆದ ಮೇ ತಿಂಗಳಲ್ಲಿ ಉದ್ಯೋಗ ಖಾತ್ರಿಯ ಶೇ.88ರಷ್ಟು ಕೂಲಿಯನ್ನು ಆಧಾರ್ ಪಾವತಿ ವ್ಯವಸ್ಥೆ (ಎ.ಬಿ.ಪಿ.ಎಸ್.) ಮೂಲಕ ಮಾಡಲಾಗಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ. 14.28 ಕೋಟಿ ಸಕ್ರಿಯ ಫಲಾನುಭವಿಗಳ ಪೈಕಿ 13.75 ಕೋಟಿ ಜನರು ಆಧಾರ್ ಜೊತೆ ಜೋಡಣೆಯಾಗಿದ್ದಾರೆ. ಇವರ ಪೈಕಿ 12.17 ಕೋಟಿ ಜನರನ್ನು ಖಾತ್ರಿ ಪಡಿಸಲಾಗಿದೆ. ಮೇ ತಿಂಗಳಲ್ಲಿ ಶೇ.88ರಷ್ಟು ಕೂಲಿಯನ್ನು ಎ.ಬಿ.ಪಿ.ಎಸ್. ಮೂಲಕ ಪಾವತಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

## ತರಳಬಾಳು ಜಗದ್ಗುರುಗಳಿಂದ ಆಶೀರ್ವಾದ ಪಡೆದ ಎಸ್ಸೆಸ್ಸೆಂ



ದಾವಣಗೆರೆ, ಜೂ.3- ರಾಜ್ಯದ ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಪ್ರಥಮ ಬಾರಿಗೆ ಬೆಂಗಳೂರಿನಿಂದ ನಗರಕ್ಕೆ ಆಗಮಿಸುವ ಮಾರ್ಗ ಮಧ್ಯೆ ಸಿರಿಗೆರೆಯ ತರಳಬಾಳು ಬೃಹನ್ಮಠಕ್ಕೆ ಭೇಟಿ ನೀಡಿದ ಎಸ್.ಎಸ್. ಮಲ್ಲಿಕಾರ್ಜುನ್ ಅವರು, ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಆಶೀರ್ವಾದ ಪಡೆದರು.

## ನಗರಕ್ಕೆ ನಾಳೆ ಸಿಎಂ ಸಿದ್ದರಾಮಯ್ಯ



ದಾವಣಗೆರೆ, ಜೂ.3- ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡಿದ್ದು ದಿನಾಂಕ 5ರ ಸೋಮವಾರ ನಗರಕ್ಕೆ ಆಗಮಿಸಲಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ಹೆಲಿಕಾಪ್ಟರ್ ಮೂಲಕ ಬಾಪೂಜಿ ಎಂ.ಬಿ.ಎ. ಗ್ರೌಂಡ್‌ಗೆ ಆಗಮಿಸಲಿರುವ ಸಿದ್ದರಾಮಯ್ಯ, ಮಧ್ಯಾಹ್ನ 12.30ಕ್ಕೆ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ನಂತರ ಮಧ್ಯಾಹ್ನ 3 ಗಂಟೆಗೆ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ.




## ಕಡಿಮೆ ಬೆಲೆಗೆ ನಿವೇಶನ ಕೊಡುವುದಾಗಿ 4.40 ಕೋಟಿ ರೂ. ವಂಚನೆ : ದೂರು

ದಾವಣಗೆರೆ, ಜೂ. 3- ಜಮೀನು ಭೂ ಪರಿವರ್ತನೆ ಮಾಡಿಸಿ, ನಿವೇಶನಗಳನ್ನು ಮಾಡಿ ಕಡಿಮೆ ಬೆಲೆಗೆ ನೀಡುವುದಾಗಿ ನಂಬಿಸಿ 54 ಜನರಿಂದ ಅಂದಾಜು 4.40 ಕೋಟಿ ರೂಪಾಯಿ ವಂಚನೆ ಮಾಡಲಾಗಿದೆ ಎಂದು ನಂದಿಶ್ರೀ ಕನ್‌ಸ್ಟ್ರಕ್ಷನ್ ಮಾಲೀಕ ಮಂಜುನಾಥ್ ಅವರ ಮೇಲೆ ಹರಿಹರ ಸಿಟಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಹಶೀಲ್ದಾರ್ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಸಂತೋಷ್ ಕುಮಾರ್ ಎಂಬುವವರು ಈ ಕುರಿತು ದೂರು ನೀಡಿದ್ದು, ನಂದಿಶ್ರೀ ಕನ್‌ಸ್ಟ್ರಕ್ಷನ್ ಮಾಲೀಕ ಮಂಜುನಾಥ್ ಎಂಬುವವರು 2019ರಲ್ಲಿ ಅಮರಾವತಿ ಗ್ರಾಮದ ರಿ.ಸ.ನಂ. 62/1ರ 3 ಎಕರೆ 37 ಗುಂಟೆ ಜಮೀನನನ್ನು ಭೂ ಪರಿವರ್ತನೆ ಮಾಡಿಸಿ ನಿವೇಶನಗಳನ್ನಾಗಿ ಮಾಡಿ ಕಡಿಮೆ ಬೆಲೆಗೆ ನೀಡುವುದಾಗಿ ನಂಬಿಸಿ, ನನ್ನಿಂದ 7.20 ಲಕ್ಷ ರೂ. ಹಣ ಸೇರಿದಂತೆ 54 ಜನರಿಂದ ಸುಮಾರು 4.40 ಕೋಟಿ ರೂಪಾಯಿ ಪಡೆದು ಜಮೀನನ್ನು ಭೂ ಪರಿವರ್ತನೆ ಮಾಡಿ, ನಿವೇಶನ ಮಾಡದೆ ತನ್ನ ಹೆಸರಿಗೆ ವರ್ಗಾಯಿಸಿಕೊಂಡು ಇಂದು, ನಾಳೆ ಎಂದು ಸುಳ್ಳು ಹೇಳುತ್ತಾ, ವಂಚಿಸಿದ್ದಾರೆ. ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದಾರೆ.

## ಹೋಮಿಯೋಪತಿ ಆರೋಗ್ಯ ಶಿಬಿರ ಇಂದು

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಉಚಿತ ಹೋಮಿಯೋಪತಿ ಆರೋಗ್ಯ ಶಿಬಿರವನ್ನು ಇಂದು ಬೆಳಿಗ್ಗೆ 11 ಕ್ಕೆ ದಾವಣಗೆರೆಯ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 911045 5199. ತಜ್ಞ ವೈದ್ಯರಾದ ಡಾ. ಎ.ಎನ್. ಸುಂದರೇಶ್. ಡಾ. ಆರತಿ ಸುಂದರೇಶ್ ಶಿಬಿರವನ್ನು ನಡೆಸಿಕೊಡುವರು.

ಅಡಿಕೆ ಸಸಿಗಳು ಮಾರಾಟಕ್ಕಿವೆ
ದಾವಣಗೆರೆ ತರಳಬಾಳು ಕೃಷಿ ಕೇಂದ್ರದ ಸಲಹೆ ಪಡೆದು ವೈಜ್ಞಾನಿಕವಾಗಿ ಸಂಸ್ಕರಿಸಿ ಬೆಳೆಸಿದ
ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ಕೈದಾಳ್ ತೋಟದಲ್ಲಿ
ಮಾರಾಟಕ್ಕಿವೆ. ಸಂಪರ್ಕಿಸಿ
98807 39392
98807 43838







